# ಮರಳ ಮಲ್ಲಿಗೆ

ಫಾಲ್ಗುಣ ಸಂಚಿಕೆ ಫೆಬ್ರವರಿ-2010

ನಮ್ಮೆಲ್ಲರ ಮನೆ ಮನಗಳ ಬಳ್ಳಿಗೆ..



# ಅಧ್ಯಕ್ಷರ ನುಡಿ....

**Dear Koota members,**

By the time you get to read our second edition of the Marala Mallige Phalguna Sanchike, Daasotsava, our first event of the calendar year, will be well and truly over. I will use this opportunity to thank all the volunteers and all our committees for the tremendous effort they have put in (and for burning the midnight oil last night) to ensure the program runs smoothly and as planned. In my opinion, the Daasotsava is any Executive & Cultural Committee's most challenging event of the year, simply because they have to 'hit the ground & keep running'. Daasotsava, erstwhile called Dasa Jayanthi, has always been an in-house program wherein the members pay remembrance to Purandara Dasa, Kanaka Dasa and other Dasas in the form of skits and singing bhajans made popular by them.

While continuing with this tradition, we have this year introduced Harikathe in a competition format so that the children of the Koota get to see here in Kuwait what most of us saw and experienced back home as children & youngsters. Our concerted effort has been to manage time and schedule the program in such a way that the Koota members are served lunch by 2 pm today. If we have managed to do that, we deserve a pat on the back. If not, we will pull up our socks and work harder for the Sports Day on March 26.

On a concluding note, I would like to remind the members about the Calender of Events for the year. It is available both in this edition of the Marala Mallige as well as the KKK website ***www.kuwaitkannadakoota.org.*** Our next meeting with all the members will be The Sports Day that can also be called as 'Tent Picnic'. Yes, the cat is out of the bag! Till then, adios.

**Harsha Rao**
**President**

# ಮರಳ ಮಲ್ಲಿಗೆಯ ಅಂತರಂಗದಿಂದ. . .

**ನಲ್ಮೆಯ ಸದಸ್ಯರೆಲ್ಲರಿಗೂ ನಮಸ್ಕಾರಗಳು,**

ಅಂತರಂಗದ ಮಾತು ತೆರೆದಿಡುವ ಮುನ್ನ, ಕಳೆದ ಸಂಚಿಕೆ ಪುಟ್ಟ ಪ್ರಯತ್ನವಾದರೂ ಅಭೂತಪೂರ್ವ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡಿದಿರಿ, ಹಾಗೂ ಪದಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತರಿಸಿದ್ದೀರಿ, ನಿಮ್ಮೆಲ್ಲರ ಪ್ರೋತ್ಸಾಹಕ್ಕೆ ನಮ್ಮ ಧನ್ಯವಾದಗಳು.

ಇನ್ನೆಲ್ಲಿ ಅಂತರಂಗದ ಮಾತುಗಳು? ನಮ್ಮ ಅಂತರಂಗದ ವಿಶೇಷಗಳೆಲ್ಲವನ್ನು ಪುಟಗಳನ್ನಾಗಿಸಿ ನಿಮ್ಮ ಮುಂದೆ ತಂದಿಟ್ಟಿದ್ದೇವಲ್ಲಾ? ಪಾಲ್ಗುಣ ಸಂಚಿಕೆಯ ವಿಶೇಷವೆಂದರೆ ದಾಸೋತ್ಸವ, ಶಿವರಾತ್ರಿ ಮತ್ತು ಮೊಹಮ್ಮದರ ಜನ್ಮದಿನ ಈ ಎಲ್ಲಾ ವಿಷಯಗಳನ್ನು ಆಧರಿಸಿ ಲೇಖನಗಳು ಬಿತ್ತರವಾಗಿವೆ ಹಾಗೂ ಪ್ರತಿ ಪುಟದ ಕೆಳಭಾಗದಲ್ಲಿ ಒಂದೊಂದು ಒಗಟುಗಳನ್ನು ನೀಡಲಾಗಿದೆ ಅದಕ್ಕೆ ಉತ್ತರಗಳು ಇದೇ ಸಂಚಿಕೆಯಲ್ಲಿ ಅಡಗಿದೆ, ಜೊತೆಗೆ ನಮ್ಮ ಮಕ್ಕಳ ಹಲವು ಉತ್ಸುಕ ಲೇಖನಗಳು ಮರಳ ಮಲ್ಲಿಗೆಯ ಕದ ತಟ್ಟಿವೆ, ಇದು ನಮಗೆ ಅತಿ ಸಂತಸ ತರುವ ವಿಷಯ. ಪಾಲ್ಗುಣಸಂಚಿಕೆಯ ವಿಷಯಗಳನ್ನು ತಪ್ಪದೇ ಮನೆಮಂದಿಯುವರೆಲ್ಲಾ ಓದಿ ನಿಮ್ಮ ಅನಿಸಿಕೆ ಅಭಿಪ್ರಾಯ ತಿಳಿಸುವ ಜೊತೆಗೆ ಸ್ಪರ್ಧೆಗಳಿಗೆ ಉತ್ತರಿಸಿ, ನಮ್ಮೆಲ್ಲರ ಹೆಮ್ಮೆಯ ಪತ್ರಿಕೆಯನ್ನು ಮತ್ತಷ್ಟು ಉಜ್ವಲಗೊಳಿಸಲು ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

***ವಂದನೆಗಳು***
***ಶುಭದಿನ***

---

**ದುಂಡಾದ ಮುಖವುಂಟು, ಕೈಗಳುಂಟು, ಶಬ್ದವುಂಟು - ಎಲ್ಲರಿಗೂ ನಾನು ಉಪಕಾರಿ, ಹಾಗಾದರೆ ನಾನು ಯಾರು?**

# ತಿಂಗಳ ವಿಶೇಷ

## ದಾಸರ ಪದ್ಯಗಳಲ್ಲಿ ಅಡುಗೆ ಪದಾರ್ಥಗಳು ಹಾಗೂ ಊಟ

ಭಕ್ತಿ ಸಾಹಿತ್ಯ ಆರಂಭವಾಗಿದ್ದು ಸುಮಾರು ಹನ್ನೆರಡನೇ ಶತಮಾನದಲ್ಲಿ. ಅಂದಿನಿಂದ ಹತ್ತೊಂಭತ್ತನೇ ಶತಮಾನದವರೆಗೆ ಅನೇಕ ದಾಸರು ಪದ್ಯಗಳನ್ನ ರಚಿಸಿದ್ದಾರೆ. ಈ ದಾಸಪದಗಳಲ್ಲಿ, ಅದರಲ್ಲೂ ಹೆಚ್ಚಾಗಿ ಪುರಂದರ ದಾಸರ ಪದಗಳಲ್ಲಿ, ಆ ಕಾಲದಲ್ಲಿ ತಯಾರಿಸಲ್ಪಡುತಿದ್ದ ಭಕ್ಷ್ಯಗಳ ಪ್ರಸ್ತಾವನೆ ಇದೆ. ದೇವರ ಪ್ರತಿಯೊಂದು ನಾಮವನ್ನೂ ಕೆಳಗೆ ಕಾಣಿಸಿದಂತೆ ಒಂದೊಂದು ಭಕ್ಷ್ಯಕ್ಕೆ ಹೋಲಿಸಿದ್ದಾರೆ.

ಪ್ರಣವ ಉಪ್ಪಿನಕಾಯಿ, ನಾರಾಯಣನಾಮ ಪಳದ್ಯ ಸಾರು. ಹೀಗೇ ಮುಂದುವರೆದು ದೇವರ ನಾಮಗಳನ್ನು ಅಮೃತಾನ್ನ, ಶಂಖಪಾಣಿಯ ನಾಮ ಶಾಕಾದಿ ಸೂಪ , ವಾಸುದೇವನೆಂಬ ನಾಮ ವಡೆಶ್ಯಾವಿಗೆ , ಪಂಚಾಕ್ಷ ನಾಮ ಪರಮಾನ್ನ, ಸಂಕರ್ಷಣ ನಾಮ ಶಾಲ್ಯಾನ್ನ, ದೋಷದೂರನ ನಾಮ ಸೂಸಲ ಕಡಬು, ಶ್ರೀ ರಾಮ ನಾಮ ಸರವಳಿಗಡ ಸಜ್ಜಿಗೆ, ಯದುಪತಿ ಎಂಬ ನಾಮ ಎಣ್ಣೋಳಿಗೆ, ದೇವಕಿಸುತ ನಾಮ ಧಧ್ಯನ್ನದ ಮುದ್ದೆ, ಗೋವಿಂದ ನಾಮ ಗುಳ್ಳೋಳಿಗೆ, ಪದುಮನಾಭ ನಾಮ ಕಲಸು ಮೇಲೋಗರ, ರಾವಣಾರಿಯ ನಾಮ ದೋಸೆ ಸುಖಿನುಂಡೆ, ಗರುಡವಾಹನ ನಾಮ ಘೃತ ಪಯೊದಧಿ, ಮಧುಸೂಧನ ನಾಮ ಮಂಡಿಗೆ ಎಂದು ಮುಂದುವರೆಯುತ್ತಾ ದೇವನ ಹೆಸರುಗಳನ್ನ ಅರಳಿನ ಪಾಯಸ, ಶ್ಯಾವಿಗೆ ಪಾಯಸ, ಕಲಸಿಟ್ಟ ಅವಲಕ್ಕಿ, ನೊರೆಪಾಲು ಸಕ್ಕರೆ, ಹಪ್ಪಳ ಸಂಡಿಗೆ, ಪನ್ನೀರು, ಕರ್ಪೂರ ವೀಳ್ಯಕ್ಕೆ ಹೋಲಿಸಿದ್ದಾರೆ.

ಭೋಜನವನ್ನು ಔಷಧಿಯಂತೆ ಉಪಯೋಗಿಸಬೇಕೆಂದೂ, ಹಿತ ಮಿತವಾಗಿ ಸಾತ್ವಿಕ ಆಹಾರ ಸೇವನೆಯಿಂದ ಇಹದಲ್ಲಿ ಆನಂದ, ರೋಗಪರಿಹಾರ, ಮಾನಸಿಕ ಉಲ್ಲಾಸಗಳೇ ಮುಂತಾದ ಉಪಯೋಗಗಳನ್ನು ಪಡೆಯುವುದೊಂದುಕಡೆಗಾದರೆ, ಪರದಲ್ಲಿ ಷಡ್ರಸಾನ್ನ "ದೃಢ ಭಕ್ತಿಯಲಿ ಉಣಲಿಕ್ಕಿದವರಿಗೆ" ದೊರೆಯುವುದೆಂದಿರುತ್ತಾರೆ. ಅಂದರೆ ಅನ್ನದಾನವನ್ನು ಕೊಂಡಾಡಿದ್ದಾರೆ.

ಆದರೆ ಈ ಕಾಲದಲ್ಲಿ ಭೋಜನದ ವಿಷಯದಲ್ಲಿ ಶಿಸ್ತು ಇಲ್ಲದೆ ಹೋಗಿದೆ. ಏನನ್ನು ತಿನ್ನಬೇಕು? ಎಷ್ಟು ತಿನ್ನಬೇಕು? ಯಾವಾಗ ತಿನ್ನಬೇಕು? ಎನ್ನುವ ಸೂಕ್ಷ್ಮವನ್ನು ತಿಳಿಯದೆ ಪೀಜಾ, ಬರ್ಗರ್ ಕಲ್ಚರ್‌ಗೆ ಮನಸೋತು ಆರೋಗ್ಯ ಹಾಳುಮಾಡಿಕೊಳ್ಳುತ್ತಿದ್ದೇವೆ. ತಂಪು ಪಾನೀಯಗಳ ಸೇವನೆ ನಮಗೆ ಅಂಟಿಕೊಂಡಿರುವ ಜಾಡ್ಯ. ಈ ತರಹೆಯ ಜೀವನಶೈಲಿ ಆರೋಗ್ಯಕ್ಕೆ ಎಷ್ಟು ಮಾರಕ ಎಂದು ವಿಚಾರಮಾಡಬೇಕಾಗಿದೆ. ಆರೋಗ್ಯ ವರ್ಧನೆಗಾಗಿ ದಾಸರು ಗುರುಕೀರ್ತನವೆಂಬ ಉಷ್ಣೋದಕ ಸೇವನೆಯನ್ನೂ, ದಿವ್ಯ ಹರಿನಾಮದ ಸಾರನ್ನವನ್ನೂ, ಗುರುಪಾದ ಸೇವೆಯೆಂಬ ಸಿಹಿ ಸಾರಿನ ಪಥ್ಯವನ್ನು ಹೇಳಿದ್ದಾರೆ.ಕೆಲವು ತರಹೆಯ ಭಕ್ಷ್ಯಗಳ ಸೇವನೆ ಮಾಡುವವರನ್ನು ಖೋಡಿಗಳೆಂದು ಕರೆದಿದ್ದಾರೆ. ಹುಳಿ ಮೂಲಂಗಿ ಈರುಳ್ಳಿ ತಿಂಬುವವ ಖೋಡಿ ಹುರುಳಿ ಗುಗ್ಗರಿ ಮುಕ್ಕಿ ಮೇಲೆ ಮಜ್ಜಿಗೆ ಕುಡಿದು ಹಿರಿಯ ಹೆಬ್ಬುಲಿಯಂತೆ ನಿದ್ರಿಪ ಖೋಡಿ" ಎಂದು ಹೇಳಿ ಅಹಾರ ಸೇವನೆಯ ವಿಚಾರದಲ್ಲಿ ಸಂಯಮ ಬೆಳೆಸಿಕೊಳ್ಳಲು ಕರೆಗೊಟ್ಟಿದ್ದಾರೆ. "ಹರಿದಿನದುಪವಾಸ ಇರುಳು ಜಾಗವ ನೀ ಮರೆಯದಿರೆಚ್ಚರಿಕೆ" ಎಂದು ಏಕಾದಶಿಯ ಉಪವಾಸ ಮಾಡಿರೆಂದು ಸಾರಿದ್ದಾರೆ. ಸ್ನಾನಾದಿಗಳನ್ನ ಮಾಡದೆ ಏನನ್ನೂ ತಿನ್ನಬಾರದೆಂಬ ನಿಯಮವನ್ನೂ ಹಾಕಿದ್ದಾರೆ. ಹಾಗೆಯೇ ಹರಿಸಮರ್ಪಣೆ ಮಾಡದೆ ಭೋಜನವನ್ನು ಮಾಡಬಾರದೆಂದು ಹೇಳುತ್ತಾ, "ಬಿಸಜನಾಭನಿಗರ್ಪಿಸದ ಅಶನವೇತಕೆ?" ಎಂದು ಕೇಳುತ್ತಾರೆ. ಪರಮಪುರುಷನಿಗೆ ಯಾವ ಭಕ್ಷ್ಯಗಳನ್ನ ನೈವೇದ್ಯ ಮಾಡಬೇಕೆಂದು ತಿಳಿಸುತ್ತಾ, ಪರಿಪರಿಯ ಭಕ್ಷ್ಯ, ಪಾಯಸ, ಶಾಕ ಶಾಲ್ಯಾನ್ನ, ವರ ರಸ ಘೃತ ಗುಡಕ್ಷೀರ, ದಧಿ ತಂದು ತಳಿಗೆ ಮಾಡೆಂದು ಅಪ್ಪಣೆಕೊಟ್ಟಿದ್ದಾರೆ.

ಹರಿಯುಂಡ ಚರುವೆ ಮಹಾ ಪ್ರಸಾದವೆಂದು ಸ್ವೀಕರಿಸಿ "ಘಟ್ಯಾಗಿ ಸಕ್ಕರೆ ತುಪ್ಪ ರೊಟ್ಟಿ ಉಣಿಸೂ" ಎಂದು ಕೋರಿದ್ದಾ-ರೆ. ಹಾಗೆಯೇ ಮೂಡಲಗಿರಿ ತಿಮ್ಮಪ್ಪನನ್ನು "ಅಪ್ಪವು ಅತಿರಸ ಮೆದ್ದ ಸ್ವಾಮಿ" , ಹಾಗೂ "ಕೇಸಕ್ಕಿ ಅನ್ನ ಉಂಬುವ ದೇವರು" ಎಂದು ಗುರುತಿಸಿದ್ದಾರೆ. ಗೋಪಾಲ ದೇವರನ್ನು "ತಿರುಗಿ ಮನೆಮನೆಯ ಬೆಣ್ಣೆ ಮೆಲ್ಲುವವ" ಎಂದೂ, "ಕರ್ಪೂರ ವೀಳ್ಯವ ಮೆಲುವವ" ಎಂದೂ ಕರೆದಿರುತ್ತಾರೆ. ಅದೇ ನಾರಾಯಣನ ಮಂಚವಾದ ಉರಗನಿಗೆ ಅಹಾರ ಗಾಳಿಯಂತೆ, ಅದಕ್ಕೇ "ಕಾಲಿಲ್ಲದ ಮಂಚ ಗಾಳಿ ನುಂಗುವ ಮಂಚ" ಎಂದು ಶೇಷನನ್ನು ಕರೆದಿರುತ್ತಾರೆ.

ದಾಸರ ಉಪದೇಶ ಬೇಕಾದಷ್ಟಿದೆ, ಬಾಚಿ ಕೊಂಡಷ್ಟೂ ಹೆಚ್ಚುವ ಅಕ್ಷಯ ಸೊತ್ತು. ಅವರಿತ್ತಿರುವ ವಿಚಾರ, ವಿವೇಕಗಳ ಸಂಪತ್ತನ್ನ ನಮ್ಮ ಸಾಮರ್ಥ್ಯವಿದ್ದಷ್ಟೂ ಸಂಚಯ ಮಾಡಬಹುದು. ಬನ್ನಿ, ದಾಸರ ಆರಾಧನೆಯ ಈ ದಿನ ಅವರ ಸದ್ವಿಚಾರಗಳನ್ನ ನೆನೆಯುತ್ತಾ, ಆರೋಗ್ಯಪೂರ್ಣ ಜೀವಶೈಲಿಯನ್ನ ಅಳವಡಿಸಿಕೊಳ್ಳೋಣ.

*-ಚನ್ನಕೇಶವ ಮೂರ್ತಿ*

## ಮೀಲಾದುನ್ನಬಿ ಅಥವಾ ಈದ್ ಮೀಲಾದ್
### (ಪ್ರವಾದಿ ಮೊಹಮ್ಮದರ ಜನ್ಮದಿನ)

ಫೆಬ್ರವರಿ 26, 2010 ಮೀಲಾದುನ್ನಬಿ, ಅಂದರೆ ಪ್ರವಾದಿ ಮೊಹಮ್ಮದ್‌ರ ಜನ್ಮದಿನ. ಇಸ್ಲಾಂ ಮತದ ಸಂಸ್ಥಾಪಕ ಮತ್ತು ದೇವದೂತ (ಪ್ರವಾದಿ, ಪೈಗಂಬರ್) ಮೊಹಮ್ಮದರು ಇಂದಿನ ಸೌದಿ ಅರೇಬಿಯಾದ ಮೆಕ್ಕಾ ಪಟ್ಟಣದಲ್ಲಿ ಏಪ್ರಿಲ್ 20 ಕ್ರಿ.ಶ. 570 ರಲ್ಲಿ (ಚಂದ್ರಮಾನ ಅಥವಾ ಇಸ್ಲಾಮಿಕ್ ಕ್ಯಾಲಂಡರಿನಲ್ಲಿ ಮೂರನೇ ತಿಂಗಳಾದ) ರಬ್ಬಿಯಲ್ ಅವ್ವಲ್ ತಿಂಗಳ 12 ನೇ ದಿನ ರಾತ್ರಿ ಜನಿಸಿದರು. ಅಬ್ದುಲ್ಲಾ ಮತ್ತು ಅಮೀನಾ ದಂಪತಿಗಳ ಮಗನಾಗಿ ಮೊಹಮ್ಮದರ ಜನ್ಮವಾಗುವ ಆರು ತಿಂಗಳ ಮುಂಚೆಯೇ ತಂದೆಯನ್ನು ಕಳೆದುಕೊಂಡರು. ಅವರ ಆರನೇ ವಯಸ್ಸಿನಲ್ಲಿ ತಾಯಿ ಅಮೀನಾರನ್ನೂ ಕಳೆದುಕೊಂಡರು. ಇವರು ಮೆಕ್ಕಾ ಪಟ್ಟಣದ 'ಬನಿ ಹಾಶಿಮ್' ಮನೆತನಕ್ಕೆ ಸೇರಿದವರಾಗಿದ್ದರು.

ಮೊಹಮ್ಮದರ ಜನ್ಮ ದಿನಾಚರಣೆಯನ್ನು ಮಾಡುವ ಅನುಮತಿ ಅವರು ಸ್ವತಃ ಕೊಟ್ಟಿರಲಿಲ್ಲ, ಈಗಲೂ ಈ ದಿನಾಚರಣೆ ಧರ್ಮಾಚರಣೆಯಲ್ಲಿ ಸೇರ್ಪಡುವುದಿಲ್ಲ. ಈ ಶುಭದಿನದಂದು ಅವರು ಹಾಕಿಕೊಟ್ಟ ಮಾನವಕಲ್ಯಾಣದ ಉತ್ತಮ ಮಾರ್ಗಗಳನ್ನು ಅನುಸರಿಸುವುದೇ ನಮ್ಮ ಆದ್ಯ ಕರ್ತವ್ಯ. ಈ ಸಂದರ್ಭದಲ್ಲಿ ಮೊಹಮ್ಮದರು ಪ್ರತಿಪಾದಿಸಿದ ಪ್ರತಿ ಮುಸ್ಲಿಮನೇ ಅಲ್ಲದೇ ಪ್ರತಿ ಮಾನವನಿಗೂ ಮೌಲ್ಯಾಧಾರಿತ ಜೀವನಕ್ಕೆ ದಾರಿಮಾಡುವ ಸೂತ್ರಗಳನ್ನು ಇಲ್ಲಿ ತಿಳಿಸಲು ಬಯಸುತ್ತೇನೆ.

ಮಹಾತ್ಮ ಗಾಂಧಿಯವರು ಮುನ್ನುಡಿ ಬರೆದ, ಅಲ್ಲಮ ಅಬ್ದುಲ್ಲ ಅಲ್-ಸುಹ್ರಾವಾದಿಯವರ ಲಿಖಿತ ಮೊಹಮ್ಮದರ ಮಾತುಗಳು ಎಂಬ ಪುಸ್ತಕದಲ್ಲಿ ಈ ಸೂತ್ರಗಳನ್ನು ಉಲ್ಲೇಖಿಸಲಾಗಿದೆ.

» ತನ್ನನ್ನು ತಾನೇ ಅರಿತವನು ದೇವರನ್ನೂ ಅರಿತುಕೊಳ್ಳಲು ಶಕ್ತ. ದೇವರಲ್ಲಿ ನಂಬಿಕೆ ಎಳ್ಳಷ್ಟು ಇದ್ದರೂ ಅಂತಹವನಿಗೆ ನರಕದ ಭಯವಿರುವುದಿಲ್ಲ ಹಾಗೆಯೇ ಅಹಂಕಾರ ಎಳ್ಳಷ್ಟಿದ್ದರೂ ಅಂತಹವನಿಗೆ ಸ್ವರ್ಗ ಲಭಿಸುವುದಿಲ್ಲ.

» ದೇವರು ಮಾನವನನ್ನು ಅವನ ತಾಯಿಗಿಂತ ಹೆಚ್ಚು ಪ್ರೀತಿಸುತ್ತಾನೆ.

» ಕೋಪ-ತಾಪವನ್ನು ಗೆದ್ದವನಿಗೆ ದೇವರು ಸದಾ ಒಳಿತನ್ನು ಬಯಸುತ್ತಾನೆ.

» ಜನ ನನಗೆ ಒಳಿತು ಮಾಡಿದರೆ ನಾನು ಒಳಿತು ಮಾಡುತ್ತೇನೆ, ಕೇಡು ಬಯಸಿದರೆ ಕೇಡು ಮಾಡುತ್ತೇನೆನ್ನಬೇಡ. ಬದಲಾಗಿ ಒಳಿತುಮಾಡುವರಿಗೆ ಒಳಿತುಮಾಡು ಮತ್ತು ಕೇಡು ಬಯಸಿದವರಿಗೆ ಕೇಡನ್ನು ಬಯಸದಿರು.

» ಮಹಾಪಾಪಗಳೆಂದರೆ: ದೇವರೊಂದಿಗೆ ಬೇರೆಯವರನ್ನು ಸರಿದೂಗುವುದು, ತಂದೆ-ತಾಯಿಗೆ ದ್ರೋಹ, ತನ್ನದೇ ಪ್ರಭೇಧವನ್ನು ಕೊಲ್ಲುವುದು ಅಂದರೆ ಮಾನವ ಮಾನವನನ್ನು ಕೊಲ್ಲುವುದು.

» ದಾನ-ಧರ್ಮಗಳಿಂದ ದೇಹಿ ಎಂದು ಬಂದವನಿಗೆ ಸಾಂತ್ವನ ನೀಡುವುದು, ದಾನ ಮಾಡಿದರೆ ಬಲಗೈ ಮಾಡಿದ ದಾನದ ಬಗ್ಗೆ ಎಡಗೈಗೆ ತಿಳಿಯದಂತೆ ಮಾಡುವುದೇ ಶ್ರೇಷ್ಠ.

» ದೇವರಲ್ಲಿ ನಿಜವಾದ ನಂಬಿಕೆಯಿರುವವನು ದೈವಭಕ್ತಿ ತೋರಿ ಆಚಾರವಿಲ್ಲದ ನಾಲಗೆ ಹರಿಯಬಿಟ್ಟರೆ ದೈವ ಭಕ್ತಿ ನಿಷ್ಪ್ರಯೋಜಕವಾಗುತ್ತದೆ.

» ಪ್ರಾಣಿದಯೆಯೂ ದೇವರ ಕೃಪೆಗಳಿಸಲು ಬಹು ಪ್ರಮುಖ ಸಾಧನ.

*-ಮುಂದುವರಿದಿದೆ . . .*

» ಈ ಕ್ರಿಯೆಗಳಿಂದ ನಿನ್ನನ್ನು ನೀನು ದೂರವಿಡು: ಸುಳ್ಳು, ನುಡಿದಂತೆ ನಡೆಯದಿರುವುದು, ನಂಬಿಕೆ ದ್ರೋಹ, ವಿವೇಚನೆಯಿಲ್ಲದ ಯೋಚನೆ ಮತ್ತು ಕ್ರಿಯೆ, ದುಡುಕು-ಕೆಡಕು, ಅನ್ಯಾಯ ಮತ್ತು ಅಧರ್ಮ.

» ಹಸಿದವನಿಗೆ ಅನ್ನದಾನ ಮತ್ತು ಸಹಾಯಾರ್ಥಿಗೆ ಸಹಾಯ ಉತ್ತಮ ಕರ್ಮಗಳು.

» ಹೆಣ್ಣೆಂದು ಕಡೆಗಣಿಸಬೇಡ, ನೋಯಿಸಬೇಡ (ಇದು ಹೆಣ್ಣು ಭ್ರೂಣಹತ್ಯೆಯನ್ನು ವಿರೋಧಿಸುವ ಪ್ರವಾದಿಯ ಪ್ರಯತ್ನವಾಗಿತ್ತು). ಹೆಣ್ಣಿನ ಪ್ರಾರ್ಥನೆ ಮತ್ತು ಮಸೀದಿ ಪ್ರವೇಶವನ್ನು ನಿಷೇಧಿಸಬೇಡ.

ಧರ್ಮ ಯಾವುದಾದರೂ ಸತ್ಯ, ಮಾನವತೆ ಮತ್ತು ದಾನ-ಧರ್ಮಕ್ಕೆ ಮಹತ್ವ ನೀಡುತ್ತದೆಂಬುದು ವಿದಿತ.

ಮೊಹಮ್ಮದರ ಜನ್ಮದಿನದ ಈ ಶುಭ ಸಂದರ್ಭದಲ್ಲಿ ಎಲ್ಲಾ ಮಾನವಜಾತಿಗೆ ಶುಭವಾಗಲೆಂದು ಆಶಿಸುವುದಲ್ಲದೆ- ಆತಂಕವಾದ, ಹೆಣ್ಣು ಭ್ರೂಣ ಹತ್ಯೆ ಮತ್ತು ಅಮಾಯಕರ ಮಾರಣಹೋಮವನ್ನು ಇಸ್ಲಾಂ ಅನುಮೋದಿಸುವುದಿಲ್ಲ ಎಂದು ತಿಳಿಯಬೇಕಾಗಿದೆ.

**- ಡಾ. ಅಜಾದ್**

## "ಓಂ ನಮ: ಶಿವಾಯ"
## ಮಂಗಳಕರ ಮಹಾದೇವನ ಭಕ್ತಿಪೂರ್ಣ ಸ್ಮರಣೆ- 'ಮಹಾಶಿವರಾತ್ರಿ'

ಅನಾದಿಕಾಲದಿಂದ ಹರಿದು ಬಂದ ಭಾರತೀಯ ಸನಾತನ ಸಂಸ್ಕೃತಿಯ ಒಂದು ದೀಪ 'ಹಬ್ಬ-ಹರಿದಿನ'. ಇದು ನಮ್ಮ ನಂಬಿಕೆ, ಭಕ್ತಿಭಾವ, ಧರ್ಮನಿಷ್ಠೆಯ ಸಂವರ್ಧಕತೆಗೊಂದು ಮೂಲ. ಜನಪದರು ನೀಡಿದ ಸುಂದರ ಕಲ್ಪನೆಯ ರೂಪ. ಆರಾಧನಾ ಪದ್ಧತಿ, ಪಾರಮಾರ್ಥಿಕ ತತ್ತ್ವಚಿಂತನೆಗಳ ಕೇಂದ್ರ. ಮನೋರಂಜನೆಯ ರಂಗಭೂಮಿ, ಸಹಬಾಳ್ವೆ ನಡೆಸುವ ವೇದಿಕೆ. ಹಿಂದೂ ವರ್ಷಾರಂಭದ ಚೈತ್ರಮಾಸದ ಯುಗಾದಿಯಿಂದ ಮೊದಲ್ಗೊಂಡು ಫಾಲ್ಗುಣ ಮಾಸದ ಹೋಳಿ ಹಬ್ಬದವರೆಗೆ ಭಾರತೀಯರ ಧಾರ್ಮಿಕತೆ, ಸಂಪ್ರದಾಯವನ್ನು ಬಿಂಬಿಸುವ ಹಲವಾರು ಪರ್ವಗಳು ಆಚರಣೆಯಲ್ಲಿವೆ. ಇದರಲ್ಲಿ ಶಿವಭಕ್ತರಿಗೆ ಅತೀ ಪವಿತ್ರವಾದ ದಿನ ಮಂಗಳಕರ ಮಹಾದೇವನ ಆರಾಧನೆ 'ಮಹಾಶಿವರಾತ್ರಿ'.

"ನಮ: ಶಿವಾಯಚ ಶಿವ ತರಾಯಚ" 'ಶಿವ' ಶಬ್ದವು ಶುಭವುಳ್ಳ, ಮಂಗಳಕರವಾದ, ಕಲ್ಯಾಣವುಳ್ಳ, ಸುದೈವದ, ಪ್ರಗತಿಶೀಲ ಮುಂತಾದ ಅರ್ಥಗಳನ್ನು ಧ್ವನಿಸುತ್ತದೆ. 'ಅಚ್' ಎಂಬ ಪ್ರತ್ಯಯವು ಸೇರಿ ಕಲ್ಯಾಣ ಗುಣವುಳ್ಳವ ಎಂಬ ಅರ್ಥದಲ್ಲಿ ಪೂರ್ಣವಾಗಿದೆ. ಪ್ರತಿ ಅಮವಾಸ್ಯೆಯ ಹಿಂದಿನ ಮಾಸ 'ಶಿವರಾತ್ರಿ'. ರಾತ್ರಿಯು ಶಿವನ ಅರ್ಧಾಂಗಿ ಪಾರ್ವತಿಯ ಸಂ-ಕೇತ. ಶಿವೆಯೆಂದೇ ಅರ್ಥ. ಆದ್ದ-ರಿಂದ ಶಿವರಾತ್ರಿಯೂ ಶಿವ-ಶಿವೆಯರ ಉಪಾಸನೆಯ ಮಹಾದಿನವೇ ಆಗಿದೆ. ರಾತ್ರಿಯ ಜಾಗರಣೆ, ಧ್ಯಾನ ಪ್ರಾಮುಖ್ಯತೆ ಪಡೆದುದರಿಂದ ಶಿವರಾತ್ರಿ ಮಂಗಳ ರಾತ್ರಿ ಎಂದಾಯಿತು. ಶಿವರಾತ್ರಿಯಲ್ಲಿ ಐದು ವಿಧ: 1) ನಿತ್ಯಶಿವರಾತ್ರಿ 2) ಪಕ್ಷ ಶಿವರಾತ್ರಿ 3) ಮಾಸಶಿವರಾತ್ರಿ 4) ಯೋಗ ಶಿವರಾತ್ರಿ 5) ಮಹಾಶಿವರಾತ್ರಿ. ಮಾಘ ಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ಮಹಾಶಿವರಾತ್ರಿ.

ಶಿವನಿಗೆ ಶಂಭು, ಈಶ, ಪಶುಪತಿ, ಮಹೇಶ್ವರ, ಗಿರೀಶ, ಚಂದ್ರಶೇಖರ, ಭೂತೇಷ, ಮೃತ್ಯುಂಜಯ, ಮೃಡ, ತ್ರಿಲೋಚನ, ಗಂಗಾಧರ, ಶೂಲಿ, ನೀಲಕಂಠ, ಮುಕ್ಕಣ್ಣ ಹೀಗೆ ಅನಂತನಾಮಗಳು. ಶಿವನ ಶರೀರ ಜ್ಯೋತಿರ್ಮಯ, ಶಿವನ ಜ್ಞಾನರೂಪವೇ ಚಂದ್ರ. ತ್ರಿಮೂರ್ತಿಗಳಲ್ಲೊಬ್ಬನಾದ ಶಿವ ಲಯಕರ್ತ. ಶಿವನ ಮಹಿಮೆ, ಸರ್ವೋತ್ತಮತೆಯನ್ನು ಅನೇಕ ಆಗಮ, ಪುರಾಣಕಾವ್ಯಗಳು ಬಣ್ಣಿಸಿವೆ. ಶಿವರಾತ್ರಿಯ ದಿನಕ್ಕೂ ಪೌರಾಣಿಕ ಹಿನ್ನಲೆಯಲ್ಲಿ ವಿಶೇಷ ಕಥೆಗಳಿವೆ. ಶಿವರಾತ್ರಿಯ ದಿನ ಶಿವನ ಜನ್ಮದಿನವೆಂದೂ, ಈಶ್ವರನು ಒಮ್ಮೆ ಆನಂದಭರದಿಂದ ತಾಂಡವ ನೃತ್ಯವೆಸಗಿದ ದಿನವೆಂದೂ, ಶಿವ-ಪಾರ್ವತಿಯರ ಪಾಣಿಗ್ರಹದ ದಿನವೆಂದೂ, ಶಿವನೂ ಲಿಂಗೈಕ್ಯವಾದ ದಿನವೆಂದೂ, ಪ್ರಳಯದಿಂದ ಸೃಷ್ಟಿ ವಿನಾಶದತ್ತ ತೆರಳಿದಾಗ ದೇವಿ ಪಾರ್ವತಿ ಶಿವನನ್ನು ಪ್ರಾರ್ಥಿಸಿದ ರಾತ್ರಿಯೆಂದೂ, ಶಿವನಿಗೆ ಬಹುಪ್ರಿಯವಾದ ರಾತ್ರಿಯೆಂದು ಹಲವಾರು ಪ್ರತೀತಿಗಳಿವೆ. ಸುರ-ಅಸುರರ ಸಮುದ್ರ ಮಥನದ ವೇಳೆ ಜಗತ್ತಿಗೆ ಕಂಟಕವಾದ ಮಹಾವಿಷ ಹೊರಬಂದಾಗ, ದೇವತೆಗಳ ಮೊರೆಗೆ ಒಲಿದು ಹಾಲಾಹಲವನ್ನು ಸೇವಿಸಿ, ಈ ವಿಷ ಶರೀರಕ್ಕೆ ಹರಡದಂತೆ ಸರ್ಪವನ್ನು ತನ್ನ ಕುತ್ತಿಗೆಗೆ ಸುತ್ತಿಕೊಂಡು ಲೋಕಕಲ್ಯಾಣವೆಸಗಿದ ದಿನ ಶಿವರಾತ್ರಿ. ಈ ಘಟನೆಯಿಂದ ಶಿವ 'ನೀಲಕಂಠ', ವಿಷಾಧರನೆಂಬ ನಾಮವನ್ನು ಪಡೆದ. ಅಂದು ದೇವತೆಗಳು ಹಾಡಿ, ನಲಿದು, ಸ್ತುತಿಸಿ, ಜಾಗರಣೆಯನ್ನು ಮಾಡಿ ಶಿವನ ಕೃಪಾಕಟಾಕ್ಷಕ್ಕೆ ಪಾತ್ರರಾದರು. ಇದರಿಂದ ಸಂತೃಪ್ತನಾದ ಶ್ರೀಕಂಠ ಶಿವರಾತ್ರಿಯಂದು ಯಾರು ಉಪವಾಸ ಮಾಡಿ ತನ್ನನ್ನು ಆರಾಧಿಸುವರೋ, ಅವರಿಗೆ ಒಲಿಯುವುದಾಗಿ ಅನುಗ್ರಹಿಸಿದ.

'ಬಿಲ್ವಪತ್ರೆ' ಶಿವನಿಗೆ ಬಲುಪ್ರಿಯವಾದುದು. ಇದು ಮುಕ್ಕಣ್ಣನ ಮೂರನೇ ನಯನದ ಸಂಕೇತ. ಪ್ರಕೃತಿದತ್ತವಾಗಿ ಅತೀ ಹೆಚ್ಚು ಧನಾತ್ಮಕ ಗುಣವನ್ನು ಹೊಂದಿರುವ ಬಿಲ್ವಪತ್ರೆಯ ಸ್ಪರ್ಶದಿಂದ ಎಷ್ಟೋ ಋಣಾತ್ಮಕ ಗುಣಗಳು ತೊ-ರೆದು ಹೋಗುತ್ತವೆಯಂತೆ. ಬಿಲ್ವದಳದ ಮಹತ್ವವನ್ನು ದೃಢಿಕರಿಸುವ ಬಹಳಷ್ಟು ಕಥೆಗಳೂ ಪುರಾಣದಲ್ಲಿವೆ, ಅದಕ್ಕೆ ಉದಾಹರಣೆಯಾಗಿ ಎಲ್ಲರಿಗೂ ತಿಳಿದಂತಹ ಬೇಡರ ಕಣ್ಣಪ್ಪನ ಕಥೆ.

ಮಹಾಶಿವರಾತ್ರಿಯಂದು ಉಪವಾಸವಿದ್ದು ಶಿವನನ್ನು ಅಭಿಷೇಕ, ಸಹಸ್ರನಾಮಗಳಿಂದ ಸುಪ್ರೀತನನ್ನಾಗಿಸುವುದು, ಧ್ಯಾನಾಸಕ್ತರಾಗಿದ್ದು ರಾತ್ರಿ ಜಾಗರಣೆಯಲ್ಲಿರುವುದು, ಪ್ರದಕ್ಷಿಣೆ-ನಮಸ್ಕಾರ, ಬಿಲ್ವಾರ್ಚನೆಯಿಂದ ಮಹಾದೇವನನ್ನು ಆರಾಧಿಸುವ ವ್ರತವೇ ಮಾಹಾಶಿವರಾತ್ರಿ. ಮಂಗಳಸ್ನಾನ ಮಾಡಿ, ಶಿವನ ವಿಗ್ರಹ ಅಥವಾ ಶಿವಲಿಂಗವನ್ನು ಗಂಗಾಭೀಷೇಕದಿಂದ ಮಜ್ಜನಗೊಳಿಸಿ, ಪಂಚಾಮೃತ, ಬಿಲ್ವಪತ್ರೆ, ಫಲಪುಷ್ಪಗಳ ಸಮರ್ಪಣೆ, ದೀಪಾರಾಧನೆ, ಮಂಗಳಾರತಿ ಹೀಗೆ ಈಶ್ವರನಿಗೆ ಷೋಡಶೋಪಚಾರದಿಂದ ಪೂಜೆ ಮಾಡುವ ವಿಧಾನವಿದೆ. ದಿನವಿಡೀ ಉಪವಾಸ, ಶಿವನ ಹಾಡು, ಭಜನೆ, ಸ್ತೋತ್ರಗಳನ್ನು ಸ್ತುತಿಸುತ್ತಾ ಜಾಗರಣೆಯಿದ್ದು, ಶಿವನ ಧ್ಯಾನದಲ್ಲಿ ಕಳೆದು, ಮರುದಿನ ಪಾರಣೆ ಮಾಡುವ ಪ್ರಕ್ರಿಯೆ ಶಿವರಾತ್ರಿಯದ್ದು. ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ ಕಿವಿಯಲ್ಲಿ ಕೀರುತಿ ತುಂಬಿ, ಕೂಡಲ ಸಂಗಮದೇವಾ ನಿಮ್ಮ ಚರಣಕಮಲದೊಳಗಾನು ತುಂಬಿ- ಎಂಬಂತೆ ಅನನ್ಯ ಭಕ್ತಿಯಿಂದ ತುಂಬು ಹೃದಯದಿಂದ ಶಿವನನ್ನು ಆರಾಧಿಸುವುದು ಶಿವರಾತ್ರಿ.

ವೈಕುಂಠ, ಸುರಲೋಕ ಎಲ್ಲವೂ ನಮ್ಮ ಕಲ್ಪನೆಯ ಲೋಕಗಳು. ಕೈಲಾಸ ಪರ್ವತ ನಮ್ಮ ಭೂಮಿಯಲ್ಲಿದೆ. ಅಲ್ಲಿ ನೆಲೆಸಿರುವವನು ಕೈಲಾಸಾಧಿಪತಿ. ಜನಮಾನಸಕ್ಕೆ ಸಮೀಪದಲ್ಲಿದ್ದು ಮನುಕುಲಕ್ಕೆ ಪರಮಾಪ್ತನಾದವನು ಶಿವ. ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಜನಪ್ರಿಯ ದೇವರು. ಭಕ್ತಾದಿಗಳ ಮನೆ-ಮನದಲ್ಲಿ, ಗುಡಿ-ದೇವಾಲಯದಲ್ಲಿ ನೆಲೆಸಿರುವ ಪರಮಪೂಜಿಪ ಭಗವಂತನಿಂದ ಲೋಕ-ಕ್ಕೆ ಕಲ್ಯಾಣವಾಗಲೆಂದು ಹಾರೈಸುತ್ತಾ, ಶಿವದೇವರ ಚರಣಾರವಿಂದಕ್ಕೆ ಒಂದು ಬಿಲ್ವದಳವನ್ನು ಸಮರ್ಪಿಸೋಣ ಶಿವರಾತ್ರಿಯಂದು.

*-ತಾರೇಂದ್ರ ಪಿ. ಶೆಟ್ಟಿಗಾರ್*

# ಕವನ ಮಾಲಿಕ

## ಸ್ವಂತಿಕೆ

ಹೇಗಿತ್ತು ನಮ್ಮ ದೇಶ
ಏಕೆ ಸೇರಿದೆ ಈ ಪರದೇಶ
ನಮ್ಮವರೆಲ್ಲರನ್ನು ಬಿಟ್ಟು
ನಮ್ಮ ಸ್ವಂತಿಕೆಯ ಮರೆತು
ಸಾಧಿಸಿದ್ದಾದರೂ ಏನನ್ನು. . . ?

ಕುರುಡು ಕಾಂಚಾಣದ ಆಕರ್ಷಣೆಗೆ
ಬಿಸಿಲುಕುದುರೆಯ ಬೆನ್ನೇರಿ
ವ್ಯಕ್ತಿತ್ವದ ಗುರುತ ಅಳಿಸಿ
ನನ್ನೊಬ್ಬನಿಗಾಗಿ ಬಾಳುತಲಿ
ಬರಿದೇ ಹೋಗುವೆ ಮನೆಗೆ...!!!

ಸಮಾಜದ ಪರಿವೇ ಇಲ್ಲದೆ
ಎಷ್ಟು ಹಣ ಗಳಿಸಿದರೂ
ಮನಶಾಂತಿ ಇಲ್ಲದೆ
ದ್ವಂದ್ವಕೊಳಗಾಗಿ. . .
ಕೊನೆಗೆ ಮರಳುವೆ ನನ್ನೂರಿಗೆ..!!!

*-ಪ್ರವೀಣ್ .ಬಿ*

................................

## ಕವನ-ಹರ್ಷ

ಕವನ ಬರೆಯಲೆಂದು
ಹೋದೆ ಕಡಲತೀರಕಂದು

ಹೆಗಲಿಗೊಂದು ಬ್ಯಾಗು
ಒಳಗೆ ಕಾಫಿ ಮಗ್ಗು

ಬರೆದು ಬರೆದು
ಹಾಳೆಯ ಹರಿದು

ಎದುರಿಗೆ ಮೂಡಿತು ರಾಶಿ
ಯಾವುದೂ ತರಲಿಲ್ಲ ಖುಷಿ

ಕಾಫಿಯ ಕುಡಿದು
ಹಕ್ಕಿಗಳ ಬಣ್ಣ ಸವಿದು

ಮರಳಿ ಬಂದೆನು ಮನೆಗೆ
ಕವನ ಹೊಳೆಯಲಿಲ್ಲ ಮನಸಿಗೆ

ಕೊನೆಗೆ ಮನೆಯಲಿ ಬರೆದೆ ನಿಮಿಷದಲಿ
ಮನವು ತುಂಬಿತು ಹರ್ಷದಲಿ

*-ಮಹೇಶ್ ಎಸ್.*

## ಆತ್ಮಾವಲೋಚನೆ

ನಡೆಯನ್ನ ಆತ್ಮವೇ
ಮುಕುತಿ ಮಾರ್ಗದ ಕಡೆಗೆ
ಭವ ಬಂಧನದಲಿ ಸಿಲುಕಿ
ಮರೆತ ಒಡೆಯನ ಕಡೆಗೆ

ನಡೆಯನ್ನ ಆತ್ಮವೇ
ಮುಕುತಿ ಮಾರ್ಗದ ಕಡೆಗೆ

ಜಗವ ಅರೆತೆ ನೀನು
ಮರೆತೆ ಅದರ ಒಡೆಯನ ನೀನು
ಹಣದ ಹೊಳೆಯನೆ ಹರಿಸಿ
ಮನವ ಬರುಡಾಗಿಸಿದೆ

ನಡೆಯನ್ನ ಆತ್ಮವೇ
ಮುಕುತಿ ಮಾರ್ಗದ ಕಡೆಗೆ

ಮರ ನೆರಳು ನೀಡುವುದು
ಸನಿಹ ಬಂದವರನ್ನು
ತನ್ನ ಕಾಯಕಮಾಡಿ
ಹರಿ ಪಾದ ಬಯಸುವುದು

ನಿನಗೇಕೆ ನನ್ನವರು
ನಿನ್ನವರೆಂಬಾ ಚಿಂತೆ
ಎಲ್ಲರ ಕಾಯುವವನವನು
ನಿನಗೇಕೆ ಅವನ ಹೊರೆ

ನಡೆಯನ್ನ ಆತ್ಮವೇ
ಮುಕುತಿ ಮಾರ್ಗದ ಕಡೆಗೆ

ಹರಿ ಒಲಿದರೆ ಜಗವು
ಸಂವೃದ್ಧಿ ಕಾಣುವುದು
ಹರಿ ಮುನಿದರೆ ಜಗವು
ಬರಡು ಬಂಜರಾಗುವುದು

ನಿನ್ನ ಬದುಕಿಗೆ ನೀನು
ಕಾರಣ ಕರ್ತೃವು ಅಲ್ಲ
ಹರಿ ಸ್ಮರಣೆ ಇಲ್ಲದಿರೆ
ನಿನಗೆ ಬದುಕೇ ಇಲ್ಲ

ನಡೆಯನ್ನ ಆತ್ಮವೇ
ಮುಕುತಿ ಮಾರ್ಗದ ಕಡೆಗೆ
ಭಗವಂತನೊಲಿಸುವ
ಭಕುತಿ ಮಾರ್ಗದ ಕಡೆಗೆ

*-ಗಾಯತ್ರಿ ರಮೇಶ್*

## ಭಕ್ತಿ ಮಾರ್ಗ-ಮುಕ್ತಿ ಮಾರ್ಗ

ನವಕೋಟಿ ನಾರಾಯಣನೆ ಬಂದ
ದಾಸನಾಗಿ ಎನುತ,
ನಶ್ವರವೀ ಶರೀರ, ಈ ಐಭೋಗ ಏತಕ್ಕಾಗಿ
ಮುಕ್ತಿ ಮಾರ್ಗಕ್ಕೆ ಬೇರೆ ಇನ್ನೇನು ಬೇಕು
ಪುರಂದರ ವಿಠ್ಠಲನ ನಾಮವೊಂದೇ ಸಾಕು
॥1॥

ಭಜನೆ, ಕೀರ್ತನೆ, ಹರಿಕಥೆಗಳ ಕೇಳಿದರೂ
ದಾಸ, ಶರಣ, ಸಂತರ ಕೀರ್ತನೆ ಪೇಳಿದರೂ
ಹುಲುಮಾನವರು ನಾವು ಹಲುಬುತ್ತಿರುವೆವು
ಮನಸ್ಸೆಂಬ ಮರ್ಕಟಕ್ಕೆ ಸದಾ
ಮಣಿದಿರುವೆವು ॥2॥

ಅರಿಷಡ್ವರ್ಗಗಳಿಗೆ ಸೋತಿರುವ ಮನುಜರೆ
ನಿಮಗಿಲ್ಲ, ಸನ್ಮಾರ್ಗದ ಸಂತಗುರು ಪರಂಪರೆ
ಕೊಂಡುಪೋಗುವುದಿಲ್ಲ ಅಷ್ಟೈಶ್ವರ್ಯ ಕಡೆಗೆ
ಜೊತೆಗ್ಯಾರು ಬಾರರು ಯಮ
ಎಳೆದೊಯ್ಯುವೆಡೆಗೆ ॥3॥

ಹುಟ್ಟು ಸಂತನಲ್ಲ, ವಾಲ್ಮೀಕಿಯಂತೆ
ಬದಲಾಗಿಲ್ಲ
ವರ್ಷಗಳೆಷ್ಟು ವ್ಯರ್ಥ ಕಾಲಹರಣ
ವಾಯಿತಲ್ಲ
ಭಕ್ತಿ, ಆಧ್ಯಾತ್ಮದ ಶಾಶ್ವತ ಸುಖ ಪಡೆಯುವ
ಅನುಕ್ಷಣ ಪಂಡರೀನಾಥನ ನಾಮ ಭಜಿಸುವ
॥4॥

*-ಸುರೇಶ್ ಶ್ಯಾಮ್‌ರಾವ್ ನೇರಂಬಳ್ಳಿ.*

................................

# ಚುಟುಕು-ಗುಟುಕು

## ಆಟ/ ಪಾಠ

ಮಗನ ಫ್ಯಾನ್ಸಿಡ್ರೆಸ್ ಸ್ಪರ್ಧೆಗೆ
ಯಮನೆಂಬ ಕಿರೀಟ. . .
ಇವನ ಮನವೊಲಿಸಲು ನನ್ನ
ಪರದಾಟ/ ಪೀಕಲಾಟ. . .
ಇದನ್ನೆಲ್ಲಾ ನೋಡಿದ ಹೆಂಡತಿಯ
ಕುಹಕ ನಗೆ ನೋಟ. . .
ಅರ್ಥವಾಯಿತು ನನಗೆ ನಿಜ
ಜೀವನದ ಆಟ/ಪಾಠ. . .

*- ರಮೇಶ್‌ಚಂದ್ರ ಟಿ. ಎನ್*

ಗುಂಡೀಲೊಬ್ಬ ಕುಳ್ಳ ನಿಂತ್ಕೊಂಡು, ಬಂದೋರ್ಗೆಲ್ಲಾ ಉತ್ತರ ಕೊಡ್ತಾನೆ.

# ವಿಶೇಷ ಪರಿಚಯ

## ಶ್ರೀ ಕ್ಷೇತ್ರ ದೇವರಗುಡ್ಡ ಮೈಲಾರ

ಮಾಘಮಾಸ ಶಿಶಿರ ಋತುವಿನ ಕೃಷ್ಣಪಕ್ಷದ ಬಿದಿಗೆ ಹುಣ್ಣಿಮೆ ಎಂದೊಡನೆ ನೆನಪಾಗುವುದು ಶ್ರೀಕ್ಷೇತ್ರ ಮೈಲಾರದ ದೇವರಗುಡ್ಡ. ಮಾಘಮಾಸದಲ್ಲಿ ಬಹಳ ಜಾತ್ರೆಗಳು ನಡೆಯುತ್ತವೆ. ಇದರಲ್ಲಿ ಶ್ರೀ ಮೈಲಾರಲಿಂಗೇಶ್ವರನ ಜಾತ್ರೆಯೂ ಒಂದು. ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ದೇವರಗುಡ್ಡದಲ್ಲಿ ನೆಲೆಸಿರುವ ಭಕ್ತೋದ್ಧಾರಕ ಶ್ರೀ ಮೈಲಾರ ಲಿಂಗೇಶ್ವರ. ರಾಣೆಬೆನ್ನೂರಿನಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಈ ಶ್ರೀ ಕ್ಷೇತ್ರಕ್ಕೆ ಪೌರಾಣಿಕ ಹಿನ್ನೆಲೆಯಿದೆ.

ಕ್ರಿ.ಶ. ಏಳನೇ ಶತಮಾನದಲ್ಲಿ ಇಲ್ಲಿನ ಕಾಡಿನ ಸುಂದರ ಪರಿಸರದಲ್ಲಿ ಋಷಿಗಳು ತಪೋನಿರತರಾಗಿ ಜೀವನ ನಡೆಸುತ್ತಿದ್ದರಂತೆ. ಇವರ ಶಾಂತಿಗೆ ಭಂಗ ಎಂಬಂತೆ ಮಣಿಕಾಸುರ-ಮಲ್ಲಾಸುರ ಎಂಬೀರ್ವ ರಾಕ್ಷಸರು ಕಾಟಕೊಡುತ್ತಿದ್ದರು. ಋಷಿಮುನಿಗಳು ಶಿವ-ಪಾರ್ವತಿಯರಲ್ಲಿ ತಮ್ಮ ಸಂಕಟವನ್ನು ತೋಡಿಕೊಂಡಾಗ ಕೈಲಾಸಪತಿ ಶಿವನು ಮಾರ್ತಾಂಡ ಭೈರವನ ರೂಪದಲ್ಲಿ ಭುವಿಗೆ ಬಂದು ಅಸುರರನ್ನು ಸಂಹರಿಸುವುದಾಗಿ ಆಶ್ವಾಸನೆ ಕೊಡುತ್ತಾನೆ. ಅದರಂತೆ ಶಿವ ಮಾರ್ತಾಂಡ ಭೈರವನಾಗಿ, ಪಾರ್ವತಿ ಗಂಗೆಮಾಳವ್ವನಾಗಿ, ಗಣಪತಿ ದೊಡ್ಡಯ್ಯನಾಗಿ, ಷಣ್ಮುಖ ಸೇನಾಪತಿ ಚಿಕ್ಕಯ್ಯನಾಗಿ, ಭೂಮಿಗೆ ಬರುತ್ತಾರೆ. ಶಿವನ ಜಡೆಯಿಂದ ಘೃತಮಾರಿ ಹುಟ್ಟುತ್ತಾಳೆ. ಘೃತಮಾರಿ ರಣಚಂಡಿಯಾಗಿ ರಾಕ್ಷಸರ ದಮನಕ್ಕೆ ಸಹಾಯಮಾಡುತ್ತಾಳೆ. ಅವಳನ್ನು ಶಾಂತಗೊಳಿಸಲು ಅವಳಿಗೆ ತುಪ್ಪದ ಅಭಿಷೇಕಮಾಡಲಾಗುತ್ತದೆ. ಈಗಲೂ ಈ ದೇವಿಗೆ 'ತುಪ್ಪದ ಮಾಳವ್ವ ' ಎಂದೇ ಕರೆಯಲಾಗುತ್ತೆ ಮತ್ತು ಈ ವಿಗ್ರಹಕ್ಕೆ ತುಪ್ಪ ಸವರಲಾಗುತ್ತೆ. ರಾಕ್ಷಸರನ್ನು ಸಂಹರಿಸಿದ ಶಿವನು 'ವಶಿಷ್ಠ ಲಿಂಗ' ಎನ್ನುವ ಹೆಸರಿನಲ್ಲಿ ಗುಡ್ಡದ ಮೇಲೆ ನೆಲಸಿದ್ದಾನೆಂದು ಪ್ರತೀತಿ ಇದೆ.

ಹುಣ್ಣಿಮೆಯ ಎರಡನೇ ದಿನ ಗಂಗೆ ಮಾಳವ್ವನ ಜೊತೆ ಮಾರ್ತಾಂಡ ಭೈರವನ ಲಗ್ನದ ಶುಭದಿನವೆಂದು ಹೇಳುತ್ತಾರೆ. ಇಲ್ಲಿಂದ 20 ಕಿ.ಮೀ ದೂರ ತುಂಗಭದ್ರಾ ದಡದ ಮೇಲಿನ ಡಂಕನಮರಡಿ ಎನ್ನುವ ಗುಡ್ಡದ ಮೇಲಿರುವ ಮೈಲಾರಕ್ಕೆ ಬಂದು ನೆಲೆಸುತ್ತಾರೆ.

ಆಳುವ ಮನೆತನದ ಕ್ಷತ್ರಿಯ ಸಂತತಿ ಈಗಲೂ ಇದೆ. ಪ್ರತಿ ವರ್ಷ ನಡೆಯುವ ಜಾತ್ರೆಯಲ್ಲಿ ಒಬ್ಬ ಗಾರುಡಿಗ ಏಳು ದಿನ ಉಪವಾಸವಿದ್ದು ವಿವಿಧ ಧಾನ್ಯಗಳ ಸಸಿಗಳನ್ನು ಬೆಳೆಸಿ ಒಡೆಯರ ಆಶೀರ್ವಾದ ಪಡೆದು ಕುದುರೆ ಏರಿ ಕಾರಣಿಕ (ಪದ ಹೇಳುವವ) ಹೇಳುವ ಬಯಲಿಗೆ ಬರುತ್ತಾನೆ. ಕಾರಣಿಕ ಹೇಳುವ ಪದದಲ್ಲಿ ವರ್ಷದ ಭವಿಷ್ಯವೂ ಅಡಗಿರುತ್ತದೆ ಎನ್ನುವ ನಂಬಿಕೆಯಿದೆ. ಇದನ್ನು ತಿಳಿದವರು ತಮಗೆ ಸಂಬಂಧಿಸಿದಂತೆ ಅರ್ಥೈಸಿಕೊಳ್ಳುತ್ತಾರೆ.

ಇಲ್ಲಿ ಪವಾಡಗಳೂ ಹಲವು ನಡೆದಿವೆ. ಹಾವನೂರು ಹನುಮಂತರಾಯನೆಂಬ ಪಾಳಯಗಾರನ ಆಳುಮಗ ಆಕಳುಗಳನ್ನು ಮೇಯಿಸಲು ಗುಡ್ಡದಮೇಲೆ ಹೋಗುತ್ತಿದ್ದನಂತೆ. ಅದರಲ್ಲಿ ಒಂದು ಕಾಮಧೇನು ಎಂಬ ಆಕಳು ಹಾಲು ಕಡಿಮೆ ಕೊಡುವುದನ್ನು ಗಮನಿಸಿ ಅನುಮಾನದಿಂದ ಗುಡ್ಡಕ್ಕೆ ಹೋದಾಗ ಆ ಆಕಳು ಒಂದೆಡೆ ತಂತಾನೇ ಹಾಲೂಡುವುದನ್ನು ನೋಡಿ ಆಶ್ಚರ್ಯಪಟ್ಟು ಪರಿಶೀಲಿಸಿದಾಗ ಅಲ್ಲಿ ಬೃಹತ್ ಲಿಂಗ ಕಂಡುಬರುತ್ತದೆ. ಅದನ್ನು ಕಂಡ ಪಾಳಯಗಾರ ಅಲ್ಲಿ ದೇವಾಲಯವನ್ನು ನಿರ್ಮಿಸುತ್ತಾನೆ ಮತ್ತು ಅದನ್ನು ಗುಡ್ಡದಯ್ಯ ಎಂದು ನಾಮಕರಣ ಮಾಡುತ್ತಾನೆ.- ಅದೇ ದೇವರಗುಡ್ಡ ಎಂದು ಪ್ರಸಿದ್ಧಿಪಡೆಯುತ್ತದೆ.

"ಏಳು ಕೋಟಿ ಏಳು ಕೋಟಿ ಘೇ ಚಾಂಗ್ ಬಲೋ" ಎಂಬ ಮಂತ್ರೋಚ್ಚಾರ ಮಾಡುತ್ತಾ ಬರುವ ಭಕ್ತರ ಸಂ-ಖ್ಯೆ ಅಪರಿಮಿತ. ಭಂಡಾರವೇ ಮುಖ್ಯ ಪ್ರಸಾದವಾದರೂ, ಹೂರಣ ಕಡುಬು, ಬುತ್ತಿ ಇಲ್ಲಿಯ ಮುಖ್ಯ ಪ್ರಸಾದವೆನಿಸಿದೆ. ಸರ್ಕಾರದಿಂದಲೂ ಗುರುತಿಸಲ್ಪಟ್ಟಿರುವ ಈ ಕ್ಷೇತ್ರ ಪ್ರಸಿದ್ಧ ಶ್ರೀ ಕ್ಷೇತ್ರವಾಗಿ ಮಾರ್ಪಟ್ಟಿದೆ.

*- ವೀಣಾ ಕುಲಕರ್ಣಿ*

---

## ಸೌಂದರ್ಯ ಸಲಹೆ

**ಆಗಾಗ್ಗೆ ಸೌತೆಕಾಯಿ ಜ್ಯೂಸ್ ಕುಡಿಯಿರಿ. ಚರ್ಮ ಸೌಂದರ್ಯ ಹೆಚ್ಚಿಸಿಕೊಳ್ಳಿ. ಏಕೆಂದರೆ, ಇದು ರಕ್ತವನ್ನು ಶುದ್ಧೀಕರಿಸುವುದರೊಂದಿಗೆ ಚರ್ಮವನ್ನು ಆರೋಗ್ಯವಂತವಾಗಿಸುತ್ತದೆ. ಅದರಲ್ಲೂ ಮುಖದಲ್ಲಿ ಉಂಟಾಗುವ ತುರಿಕೆಗೆ ಇದು ರಾಮಬಾಣ. ಎಣ್ಣೆ ಚರ್ಮವನ್ನು ಟೋನ್ ಮಾಡುವ ಶಕ್ತಿ ಇದಕ್ಕಿದೆ.**

## ಅನುಭವದ ನುಡಿ ಅನುಭಾವದ ಕಿಡಿ

1) ಆಯಂ ನಿಜಃ ಪರೋದೇತಿ, ಗಣನಾಲಘುಚೇತಸಾಮ್ ಉದಾರ ಚರಿತಾನಾಂತು ವಸುಧೈವ ಕುಟುಂಬಕಮ್॥

'ಇವನು ನಮ್ಮವನು, ಇವನು ಬೇರೆಯವನು' ಎಂಬ ಬೇಧ ಭಾವ ಸಂಕುಚಿತ ಬುದ್ಧಿಯವರಲ್ಲಿ ಅಷ್ಟೇ ಇರುತ್ತದೆ. ಉದಾತ್ತ ಹೃದಯದವರ ಪಾಲಿಗಂತೂ ಜಗತ್ತೇ ಕುಟುಂಬವಾಗಿರುತ್ತದೆ.

2) ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ ಷಡೇತೇ ಯತ್ರ ವರ್ತಂತೇ ದೈವಂ ತತ್ರ ಸಹಾಯಕೃತ್॥

ಕ್ರಿಯಾಶೀಲತೆ, ಸಾಹಸ ಪ್ರವೃತ್ತಿ, ಧೈರ್ಯದಿಂದ ಮುನ್ನುಗ್ಗುವ ಗುಣ, ಚುರುಕುಬುದ್ಧಿ, ಉಕ್ಕುವ ಶಕ್ತಿ ಮತ್ತು ಪರಾಕ್ರಮಗಳು ಎಲ್ಲಿರುತ್ತವೆಯೋ ಅಲ್ಲಿಗೆ ಅದೃಷ್ಟವೂ ಒಲಿದು ಬರುತ್ತದೆ.

3) ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್ ಕ್ಷಣೇ ನಷ್ಟೇ ಕುತೋ ವಿದ್ಯಾ ಕಣತ್ಯಾಗೇ ಕುತೋಧನಮ್॥

ಕ್ಷಣ ಕ್ಷಣವನ್ನೂ ಸದುಪಯೋಗಗಳಿಸುವವರಿಗೆ ವಿದ್ಯೆ ಒಲಿದರೆ, ಪೈಸೆ ಪೈಸೆಯನ್ನೂ ಉಳಿತಾಯ ಮಾಡುವವರಿಗೆ ಸಂಪತ್ತು ಒಲಿಯುತ್ತದೆ. ಕ್ಷಣ ಕ್ಷಣವೂ ವ್ಯರ್ಥವಾಗುತ್ತಾ ಹೋದರೆ ವಿದ್ಯೆಗೂ ಭಂಗ, ಪೈಸೆ ಪೈಸೆಯೂ ಪೋಲಾಗುತ್ತಾ ಹೋದರೆ ಸಂಪತ್ತಿಗೂ ಚ್ಯುತಿ ತಪ್ಪಿದ್ದಲ್ಲ.

4) ದುಃಖೇ ದುಃಖಾಧಿಕಾನ್ ಪಶ್ಯೇತೇ ಸುಖೇ ಪಶ್ಯೇತ್ ಸುಖಾದಿಕಾನ್ ಆತ್ಮಾನಂ ಶೋಕ ಹರ್ಷಾಭ್ಯಾಂ, ಶತ್ರುಭ್ಯಾಮಿವ ನಾರ್ಪಯೇತ್॥

ದುಃಖ ಬಂದಾಗ ತನಗಿಂತಾ ಹೆಚ್ಚು ದುಃಖಿಗಳಾಗಿರುವವರನ್ನು ನೋಡಬೇಕು. ಸುಖ ಬಂದಾಗ ತನಗಿಂತಾ ಹೆಚ್ಚು ಸುಖಿಗಳಾದವರನ್ನು ನೋಡಬೇಕು. ಶತ್ರುಗಳಿಗೆ ತನ್ನನ್ನು ಒಪ್ಪಿಸಿಕೊಳ್ಳದಂತೆ ಸುಖ ದುಃಖಗಳೆರಡಕ್ಕೂ ಮನುಷ್ಯ ತನ್ನನ್ನು ಒಪ್ಪಿಸಿಕೊಳ್ಳಬಾರದು.

5) ಪಠತೋ ನಾಸ್ತಿ ಮೂರ್ಖತ್ವಂ, ಜಪತೋ ನಾಸ್ತಿ ಪಾತಕಮ್, ಮೌನಿನಃ ಕಲಹೋ ನಾಸ್ತಿ, ನ ಭಯಂ ಚಾಸ್ತಿ ಜಾಗ್ರತಃ॥

ವ್ಯಾಸಂಗ ನಿರತನ ಬಳಿ ದಡ್ಡತನ ಸುಳಿಯದು, ನಾಮ ಸ್ಮರಣೆಗೈಯುತ್ತಿರುವವನ ಬಳಿ ಪಾಪ ಸುಳಿಯದು, ಮೌನವಾಗಿರುವವನ ಬಳಿ ಜಗಳ ಸುಳಿಯದು, ಸದಾ ಸಿದ್ಧನಾಗಿರುವವನ ಬಳಿ ಭಯ ಸುಳಿಯದು.

*-ಸಂಗ್ರಹ : ಡಾ. ನಿರುಪಮಾ ದಿನೇಶ್*

---

**ಗಿರಗಿರನೆ ತಿರುಗ್ತದೆ ಚಕ್ರವಲ್ಲ, ಅದಕ್ಕೆರಡು ಕೊಂಬುಂಟು ಮೃಗವಲ್ಲ**

# ಹೊರನಾಡ ಕನ್ನಡಿಗರು

## ದೆಹಲಿ ಕನ್ನಡ ಸಂಘ

ರಾಜ್ಯದ ಹೊರಗೆ ಅಂದರೆ ಹೊರನಾಡಿನ ಸಂಘ ಸಂಸ್ಥೆಗಳ ಉದ್ದೇಶಗಳು ಘನವಾಗಿರುತ್ತವೆ. ಏಕೆಂದರೆ ಇಲ್ಲಿ ಅನ್ಯ ಭಾಷೆಗಳ, ಸಂಸ್ಕೃತಿಯ ಪ್ರಭಾವ, ದಬ್ಬಾಳಿಕೆ ಹೆಚ್ಚು. ಜೊತೆಗೆ ಉದ್ಯೋಗ ನಿಮಿತ್ತ ಹೊರರಾಜ್ಯಗಳಿಗೆ ವಲಸೆ ಬರುವ ಮತ್ತು ಇಲ್ಲೇ ನೆಲೆ ನಿಲ್ಲಬೇಕಾದ ಪರಿಸ್ಥಿತಿಯಲ್ಲಿ ಮೂಲ ಸಂಸ್ಕೃತಿಯನ್ನು ಕಾಪಾಡಿಕೊಂಡು ಅಭಿವೃದ್ಧಿಪಡಿಸುವ ಹೊಣೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹೊರನಾಡಿನಲ್ಲಿ ಅದರಲ್ಲೂ ಬಹು ಸಂಸ್ಕೃತಿಯ ದೆಹಲಿಯಂತಹ ನಗರ ಪ್ರದೇಶದಲ್ಲಿ ಸಂಘವನ್ನು ಕಟ್ಟಿ ಅದನ್ನು ಇತರೆಲ್ಲ ರಾಜ್ಯಗಳ, ಭಾಷೆಗಳ ಜನರಿಗೆ ಮಾದರಿಯಾಗುವಂತೆ ಬೆಳೆಸುತ್ತಿರುವ ದೆಹಲಿ ಕನ್ನಡಿಗರ ಭಾಷಾಭಿಮಾನ ಮತ್ತು ಸಾಂಸ್ಕೃತಿಕ ಪ್ರಜ್ಞೆ ಅನನ್ಯವಾದುದು. ರಾಜಧಾನಿಯ ಕನ್ನಡಿಗರ ಭಾಷಾಭಿಮಾನ ಮತ್ತು ಕನ್ನಡ ಪ್ರಜ್ಞೆಗೆ ದ್ಯೋತಕವಾಗಿ ನಿಂತಿರುವುದು ದೆಹಲಿ ಕರ್ನಾಟಕ ಸಂಘ.

ಬೆರಳೆಣಿಕೆಯ ಕನ್ನಡಿಗರು ಒಂದೆಡೆ ಸೇರಿ 1948ರಲ್ಲಿ ದೆಹಲಿಯಲ್ಲಿ ಆರಂಭಿಸಿದ ಪುಟ್ಟ ಸಂಘವೊಂದು ಇದೀಗ ನಾಡು, ಹೊರನಾಡು ಹಾಗೂ ವಿದೇಶಗಳಲ್ಲಿ 3000 ಮಂದಿ ಆಜೀವ ಸದಸ್ಯರನ್ನು ಮತ್ತು ನಾಡಿನ ಪ್ರಮುಖ ಗಣ್ಯರನ್ನು ಗೌರವ ಸದಸ್ಯರನ್ನಾಗಿ ಹೊಂದಿ ಬೃಹದಾಕಾರವಾಗಿ ಬೆಳೆದಿದೆ.

ಡಾ. ಸರೋಜಿನಿ ಮಹಿಷಿ ಕೊಡುಗೆ: ಸಂಘ ಸ್ವಂತ ಜಾಗಕ್ಕಾಗಿ ಎದುರು ನೋಡುತ್ತಿದ್ದಾಗ ಪ್ರಸ್ತುತ ಕಟ್ಟಡ ತಲೆ ಎತ್ತಿರುವ ಆರ್.ಕೆ. ಪುರಂನಲ್ಲಿ ನಿವೇಶನವನ್ನು ಒದಗಿಸಿಕೊಡುವಲ್ಲಿ ಡಾ. ಸರೋಜಿನಿ ಮಹಿಷಿ ಅವರ ಕೊಡುಗೆ ಅನುಪಮವಾದುದು. ಕೇಂದ್ರ ಸಚಿವರಾಗಿದ್ದ ಮಹಿಷಿ ಅವರ ನಿವಾಸವೇ ಅದುವರೆಗೆ ದೆಹಲಿ ಕನ್ನಡಿಗರ ಕನ್ನಡ ಚಟುವಟಿಕೆಯ ತಾಣವಾಗಿತ್ತು. 1966ರಿಂದ 1983ರವರೆಗೆ ಅವರು ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

**ನೂತನ ಸಮುಚ್ಚಯದ ಹುಟ್ಟು ಮತ್ತು ಬೆಳವಣಿಗೆ:** ದೆಹಲಿ ಕರ್ನಾಟಕ ಸಂಘವು ತನ್ನದೇ ಆದ ನೂತನ ಸಾಂಸ್ಕೃತಿಕ ಸಮುಚ್ಚಯವನ್ನು ಕಟ್ಟಬೇಕೆಂಬ ಕನಸು ಮೊಳಕೆಯೊಡೆದಿದ್ದು 1994ರಲ್ಲಿ. ಅದು ಶಂಕುಸ್ಥಾಪನೆಗೊಂಡು ಭರದಿಂದ ನಿರ್ಮಾಣಗೊಳ್ಳಲು ತೊಡಗಿದ್ದು 2004ರಲ್ಲಿ. ಸಂಘದ ಅತಿಥಿ ಗೃಹದಲ್ಲಿ ಏಳು ಹವಾನಿಯಂತ್ರಿತ ಕೊಠಡಿಗಳಿವೆ. ಒಂದು ಹಾಲ್ ಇರುವ ಅತಿಥಿ ಗೃಹ ಕರ್ನಾಟಕದಿಂದ ಬರುವ ಕನ್ನಡಿಗರಿಗೆ ಆಶ್ರಯ ನೀಡುವಲ್ಲಿ ಸದಾ ನೆರವಾಗಿದೆ. ಕಡಿಮೆ ದರದಲ್ಲಿ ವಸತಿ ಸೌಲಭ್ಯ ದೊರೆಯುವುದರಿಂದಾಗಿ ಈಗ ದೆಹಲಿಗೆ ಆಗಮಿಸುವ ಕನ್ನಡಿಗರ ಸಂಖ್ಯೆಯೂ ಹೆಚ್ಚಾಗುತ್ತಿದೆ.

**ಸಾಹಿತ್ಯ– ಸಂಸ್ಕೃತಿಗಳ ಆಶ್ರಯ ತಾಣ:** ಐವತ್ತರ ದಶಕದಲ್ಲೇ ಟಿ.ಪಿ. ಕೈಲಾಸಂ ಅವರ ನಾಟಕಗಳು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದವು. ಇಲ್ಲಿ ಸ್ಥಾಪನೆಗೊಂಡ 'ಕನ್ನಡ ಭಾರತಿ' ಸಂಸ್ಥೆ ದೆಹಲಿಯ ಸಾಂಸ್ಕೃತಿಕ ವಾತಾವರಣ ಮತ್ತು ಕನ್ನಡ ಪ್ರಜ್ಞೆಯನ್ನು ಬಹುಕಾಲ ಜಾಗೃತಗೊಳಿಸಿತ್ತು. ರಾಜಧಾನಿಯ ರಂಗ ಚಟುವಟಿಕೆಗಳಿಗೆ ಶ್ರೀ ಎಂ.ವಿ. ನಾರಾಯಣ ರಾವ್, ಶ್ರೀ ಎಂ.ಎಸ್. ಸತ್ಯು, ಶ್ರೀ ಯು. ಪ್ರಭಾಕರ್ ರಾವ್, ಶ್ರೀ ಎಚ್. ಎಸ್. ಕುಲಕರ್ಣಿ ಮೊದಲಾದವರ ದೇಣಿಗೆ ಅಪಾರ.

**ಸಂಘದ ಮುಖವಾಣಿ 'ಅಭಿಮತ':** ಮೊದಲ ಬಾರಿಗೆ ಸಂಘ 1990ರಲ್ಲಿ ಹೊರತಂದ 'ಅಭಿಮತ' ಮಾಸಪತ್ರಿಕೆ ತದನಂತರ ನಿರಂತರವಾಗಿ ಪ್ರಕಟವಾಗುತ್ತಲೇ ಸಂಘದ ಮುಖವಾಣಿಯಾಗಿ ಬೆಳೆದಿದೆ. ಇದೀಗ 'ಅಭಿಮತ' ಸಂಘದ ಚಟುವಟಿಕೆಗಳ ವರದಿಯಷ್ಟೇಯಲ್ಲ ಅನೇಕ ಸೃಜನಶೀಲ ಬರಹಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಆರಂಭದಲ್ಲಿ ಎಂಟು ಪುಟಗಳಿಗೆ ಮೀಸಲಾಗಿದ್ದ ಪತ್ರಿಕೆ ಈಗ ಮೂವತ್ತೆರಡು ಪುಟಗಳಿಗೆ ವಿಸ್ತರಿಸಿದೆ.

**ಇನ್‌ಫೋಸಿಸ್ ಫೌಂಡೇಶನ್ ಗ್ರಂಥಾಲಯ:** ಸಂಘದ ಗ್ರಂಥಾಲಯವನ್ನು ಬಹುತೇಕವಾಗಿ ದಾನಿಗಳ ಸಹಾಯದಿಂದ ಬೆಳೆಸಲಾಗಿದೆ. ಸಂಘಕ್ಕೆ ಭೇಟಿ ನೀಡಿದ ಲೇಖಕರೆಲ್ಲರೂ ತಮ್ಮ ಪ್ರಕಟಣೆಗಳನ್ನು ಉದಾರವಾಗಿ ಸಂಘಕ್ಕೆ ನೀಡಿದರೆ, ಕೆಲವು ಮಹನೀಯರು ತಮ್ಮ ವೈಯಕ್ತಿಕ ಪುಸ್ತಕ ಸಂಗ್ರಹವನ್ನು ಸಂಘಕ್ಕೆ ನೀಡಿದ್ದಾರೆ.

ಒಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರ ಅಭಿವೃದ್ಧಿಗೆ ಪಣತೊಟ್ಟ ಕರ್ನಾಟಕವನ್ನು ಸಮರ್ಥವಾಗಿ ಪ್ರತಿನಿಧಿಸುವ ಸಾಂಸ್ಕೃತಿಕ ರಾಯಭಾರಿಯಾಗಿ ಹೊರಹೊಮ್ಮುತ್ತಿದೆ.

**– ವೀರೇಶ ಹೊಗೆಸೊಪ್ಪಿನವರ್**
**ನವದೆಹಲಿ.**

# ಕವಿ ಪರಿಚಯ

## ದ.ರಾ.ಬೇಂದ್ರೆ(ಅಂಬಿಕಾತನಯ ದತ್ತ)



ಧಾರವಾಡದ ಸಾಧನ ಕೇರಿಯ ವೈದಿಕ ಮನೆತನದಲ್ಲಿ 1896 ಜನವರಿ 30ರಂದು ಜನ್ಮಿಸಿದರು.ಇವರ ತಂದೆ ರಾಮಚಂದ್ರ ಬೇಂದ್ರೆ ಮತ್ತು ತಾಯಿ ಅಂಬವ್ವ. ಇವರು 1918ರಲ್ಲಿ ಬಿ.ಎ. ಪದವಿ ಪಡೆದು ವಿಕ್ಟೋರಿಯಾ ಹೈಸ್ಕೂಲ್(ಈಗಿನ ವಿದ್ಯಾರಣ್ಯ ಹೈಸ್ಕೂಲ್)ನಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದರು. ನಂತರ 1935ರಲ್ಲಿ ಎಂ.ಎ. ಪದವಿ ಗಳಿಸಿ ಸೊಲ್ಲಾಪುರದ ಐ.ಎ.ವಿ. ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. 1920ರಲ್ಲಿ ಗೆಳೆಯರ ಗುಂಪನ್ನು ಕಟ್ಟಿ ಸಾಹಿತ್ಯಕ್ಕಾಗಿ ದುಡಿದರು. ಇವರು ಜಯಕರ್ನಾಟಕ ಮಾಸಪತ್ರಿಕೆಯನ್ನು ಸಹಾ ನಡೆಸಿದರು. ಇವರು ಅನೇಕ ಕವನ ಸಂಕಲನಗಳು, ನಾಟಕಗಳು, ವಿಮರ್ಶಾ ಗ್ರಂಥಗಳು ಮತ್ತು ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ.

ಇವರ ಪ್ರಸಿದ್ಧ ಕೃತಿಗಳು ನಾಕುತಂತಿ, ಅರಳು ಮರಳು, ಗರಿ, ನಾದಲೀಲೆ, ಸಖೀಗೀತಾ, ಉಯ್ಯಾಲೆ, ಮೇಘದೂತ, ಮತ್ತೆ ಶ್ರಾವಣ ಬಂತು, ದೆವ್ವದ ಮನೆ, ನಿರಾಭರಣ ಸುಂದರಿ ಮತ್ತು ಶಾಂತಲಾ.1935ರಲ್ಲಿ ಮುಂಬೈನಲ್ಲಿ ನಡೆದ ಕನ್ನಡ ಸಮ್ಮೇಳನದಲ್ಲಿ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು.

1943ರಲ್ಲಿ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ "ಅರಳು ಮರಳು" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು "ನಾಕುತಂತಿ" ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕಾಶಿ ವಿದ್ಯಾಪೀಠ, ವಾರಣಾಸಿ, ಮೈಸೂರು ಮತ್ತು ಕರ್ನಾಟಕ ವಿಶ್ವ ವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಕೊಟ್ಟಿದ್ದಾರೆ. ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಮತ್ತು 1968ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಸಹಾ ಪಡೆದರು.

1980ರ ಅಕ್ಟೋಬರ್ 26ರಂದು ದೇಹವನ್ನು ತ್ಯಜಿಸಿದರು.

# ಸಣ್ಣಕಥೆ

## ನಾರದರ ಕಥೆಗಳು

(ಸಂಗ್ರಹ)

ಒಂದೂರಿನಲ್ಲಿ ಒಬ್ಬ ರೈತನಿದ್ದ. ವೃದ್ಧಾಪ್ಯದಿಂದ ಆತ ಒಂದು ದಿನ ತೀರಿ–ಕೊಂಡ. ಉತ್ತರ ಕ್ರಿಯೆಗಳೆಲ್ಲ ಮುಗಿದಮೇಲೆ ಮಕ್ಕಳು ಆತನ ಉಯಿಲು (ವಿಲ್ಲು) ಓದಿ ನೋಡಿದರು. ಅದರಲ್ಲಿ ಹೀಗೆ ಬರೆದಿತ್ತು. “ ನನ್ನ ಆಸ್ತಿಯ ಅರ್ಧಾಂಶ (1/2) ಹಿರಿಯ ಮಗನಿಗೆ, ಮೂರನೆಯ ಒಂದಾಂಶ (1/3) ಎರಡನೆ ಮಗನಿಗೆ, ಒಂಭತ್ತನೇ ಒಂದಂಶ (1/9) ಮೂರನೇ ಮಗನಿಗೆ ಸಲ್ಲಬೇಕು”. ಇದನ್ನೋದಿದ ನಂತರ ಮಕ್ಕಳು ಗೊಂದಲಕ್ಕೊಳಗಾದರು. ಏಕೆಂದರೆ ರೈತ ಬಿಟ್ಟು ಹೋದ ಆಸ್ತಿ ಕೇವಲ 17 ಹಸುಗಳು ಮಾತ್ರ ಮತ್ತೇನೂ ಇಲ್ಲ. 17 ಹಸುಗಳನ್ನು ಅರ್ಧ, ಮೂರನೇ ಒಂದು, ಒಂಬತ್ತನೇ ಒಂದು ಭಾಗ ಮಾಡುವುದು ಹೇಗೆ? ಈ ಕುರಿತು ಅವರೆಲ್ಲಾ ಚಿಂತಿತರಾಗಿದ್ದಾಗ ನಾರದ ಮುನಿಗಳು ಅಲ್ಲಿಗೆ ಬಂದರು. ಅವರೆಲ್ಲರೂ ಅವರಿಗೆ ನಮಿಸಿ ಅವರ ಸಹಾಯವನ್ನು ಯಾಚಿಸಿದರು. ನಾರದರ ಎದುರಿಗೆ ಮತ್ತೊಮ್ಮೆ ಉಯಿಲನ್ನು ಓದಲಾಯಿತು. ನಾರದರು ನಕ್ಕು ರೈತನ ಮಕ್ಕಳಿಗೆ ಎಲ್ಲಾ 17 ಹಸುಗಳನ್ನು ತಂದು ಸಾಲಾಗಿ ನಿಲ್ಲಿಸಲು ಹೇಳಿದರು. ಈಗ ಕೇಳಿ ನನ್ನಲ್ಲಿರುವ ಒಂದು ಹಸು ಇದೆ. ಅದನ್ನು ತಂದು ಈ ಹಸುಗಳ ಜೊತೆ ನಿಲ್ಲಿಸಿದರೆ ಒಟ್ಟು 18 ಹಸುಗಳಾಗುತ್ತವೆ. ಅದರ ಅರ್ಧ (1/2) ಅಂದರೆ 9 ಹಸುಗಳನ್ನು ಹಿರಿಯ ಮಗ ತೆಗೆದುಕೊಳ್ಳಲಿ. ಮೂರನೆಯ ಒಂದಂಶ (1/3) ಅಂದರೆ 6 ಹಸುಗಳನ್ನು ಎರಡನೆಯ ಮಗ ತೆಗೆದುಕೊಳ್ಳಲಿ. ಒಂಭತ್ತನೆಯ ಒಂದಂಶ (1/9) ಅಂದರೆ ಎರೆಡು ಹಸುಗಳು ಕಿರಿಯ ಮಗನಿಗಿರಲಿ. ಮಕ್ಕಳೇ ಈಗ ನಾನು ನಿಮ್ಮ ತಂದೆಯ ಉಯಿಲಿನಂತೆ ಹಸುಗಳನ್ನು ಹಂಚಿದ್ದೇನೆ. ಅವೆಲ್ಲಾ ಒಟ್ಟು ಸೇರಿದರೆ (9+6+2=17) 17 ಹಸುಗಳೇ ಎಂದು ವಿವರಿಸಿ ನಗುತ್ತಾ ತಮ್ಮದಾದ ಹಸುವನ್ನು ತೆಗೆದುಕೊಂಡು ಇದನ್ನು ಲೆಕ್ಕಕ್ಕೆ ಸೇರಿಸಲು ಮಾತ್ರ ಬಳಸಿದೆನಷ್ಟೆ ಎನ್ನುತ್ತಾ ನಿಮಗೆಲ್ಲಾ ಶುಭವಾಗಲಿ ಎಂದು ಹಾರೈಸುತ್ತಾ ಹೊರಟು ಹೋದರು.

**ಮತ್ತಷ್ಟು ಕಥೆಗಳಿಗಾಗಿ ವೀಕ್ಷಿಸಿ ಮುಂಬರುವ ಸಂಚಿಕೆ......**

– ಬದರಿ

# ಆರೋಗ್ಯ ಸಂಪದ

## *Teeth*
## *When? Why? What?*

**When does the first or Baby teeth develop?**

The tooth bud is already present at the time of birth. This will start to grow and move to come out at around 6 months of age. All the twenty milk or baby teeth are out by the time the child is two to two and half years.

The first baby tooth to be lost is the lower front teeth called the incisors. This is followed by the upper front teeth. The first teeth to erupt are called the lower central incisors around the age of 6-12 months. This is followed by the lateral incisors at 9-16 months. Then the canines (third tooth from the mid-line) erupt around 16-23 months.

The first permanent molar (the first big tooth to come out at the back region of the mouth) is an important tooth from the point of function and development. This tooth usually erupts at the age of six (called sixth year molar tooth). This tooth comes out before any baby teeth have fallen out. It usually bears the maximum load of mastication (chewing force).

All the permanent teeth are in place by the age of 12 to 13 years, except the wisdom teeth. These may erupt anytime between 18-25 years of age.

**Why Tooth care is necessary?**

Good oral hygiene can help prevent bad breadth, tooth decay and gum disease. This helps in retaining the teeth till old age. Gum disease increases the risk of other health problems like Cardiac problem. They are sometime an indication of undiagnosed systemic disease like Diabetes.

Saliva testing can also measure illegal drugs use, environmental toxins, hormones and antibodies indicating hepatitis or HIV infection, among other things. It is said that in the future saliva testing may take credence over blood testing.

Both in children and adults poor oral hygiene leads to accumulation of plaque. This in turn changes to Calculus and settles on the teeth due to improper brushing. This causes bleeding gums and periodontal disease. This may lead to loss of teeth.

Since the baby or milk teeth are going to be replaced by adult teeth, most people tend to neglect these teeth. The care to child's first set of teeth is of utmost importance. Healthy teeth help the child to chew the food properly, learn to speak clearly and maintain the necessary space for the future permanent teeth.







What Orthodontic treatment options exist for a child? - Look Forward for Next Edition.

***-Dr. Balajee***

# ಮೆದುಳಿಗೊಂದು ಕಸರತ್ತು – ತೋರಿಸಿ ನಿಮ್ಮ ತಾಕತ್ತು




## ಎಡದಿಂದ ಬಲಕ್ಕೆ

1. ಧರ್ಮಸ್ಥಳದಲ್ಲಿ ಕಾಣುವ ದೇವರು (5)
2. ಶಿವನ ಪತ್ನಿಯರು (4)
3. ಉಡುಪಿಯಲ್ಲಿ ಕೃಷ್ಣನನ್ನೇ ತಿರುಗಿಸಿದ ಭೂಪ (7)
4. ಇವಳ ಕಟಾಕ್ಷವಿದ್ದರೆ ಐಶ್ವರ್ಯಕ್ಕೆ ಕೊರತೆಯಿಲ್ಲ (5)
5. ಕದಂಬರ ಆಳ್ವಿಕೆಯ ಸ್ಥಾಪಕ (3)
6. "ಅಮರ ಮಧುರ ಪ್ರೇಮ" ಹಾಡಿನ ಚಿತ್ರ (7)
7. "ರಾಮನ ಅವತಾರ ರಘುಕುಲ ಸೋಮನ ಅವತಾರ" ಹಾಡಿನ ಚಿತ್ರ (4)
8. ಸತ್ಯಕ್ಕಾಗಿ ಕುಟುಂಬವನ್ನು ಮಾರಿಕೊಂಡವ (6)

**ಸುಳಿವು:** ಎಲ್ಲಾ ಉತ್ತರಗಳು ಕನ್ನಡದ ಪೌರಾಣಿಕ ಮತ್ತು ಭಕ್ತಿ ಪ್ರಧಾನ ಚಲನಚಿತ್ರಗಳಾಗಿವೆ.

## ಮೇಲಿನಿಂದ ಕೆಳಕ್ಕೆ

1. ಇತ್ತೀಚೆಗೆ ಈತನ ಪಟ್ಟಾಭಿಷೇಕದ 500 ವರ್ಷದ ಆಚರಣೆ (7)
9. ರಾಯರ ಶ್ರೀ ಕ್ಷೇತ್ರ (7)
10. ಕುರುಬನಿಂದ ಕವಿ (8)
11. "ಶಿವ ಶಿವ ಎಂದರೆ ಭಯವಿಲ್ಲ" ಹಾಡಿನ ಚಿತ್ರ (ತಿರುಗಿದೆ) (6)
12. ಕಣ್ಣು ಕಿತ್ತು ಲಿಂಗಕ್ಕೆ ಅರ್ಪಿಸಿದವನು (6)
13. ಮಣಿಪುರದ ರಾಜ (5)
14. "ಸ್ವಾಭಿಮಾನದ ನಲ್ಲೆ" ಯಾವ ಚಿತ್ರದ್ದು (ತಿರುಗಿದೆ) (5)

**ಸ್ಪರ್ಧೆ:** ನಿಮ್ಮ ಉತ್ತರಗಳನ್ನು ಈ–ಮೈಲ್ ಮೂಲಕ ಕಳಿಸಿಕೊಡಿ. ಮೊದಲು ಬಂದ ಎರಡು ಸರಿ ಉತ್ತರಗಳಿಗೆ ಬಹುಮಾನ ನೀಡಲಾಗುವುದು.

***e-mail:*** maralamallige2010@gmail.com

## ಮನೆಮದ್ದು

➤ಮೆಂತ್ಯ ಸೊಪ್ಪನ್ನು ಊಟಕ್ಕೆ ಸಾಂಬಾರ್ ಅಥವಾ ಪಲ್ಯದ ಮೂಲಕ ಸೇವಿಸಿದರೆ ರಕ್ತದ ಒತ್ತಡ ಕಡಿಮೆಯಾಗುತ್ತದೆ.

➤ವಾಂತಿ ಅಥವಾ ಅಜೀರ್ಣಕ್ಕೆ ಮಜ್ಜಿಗೆಯಲ್ಲಿ ಕೊತ್ತಂಬರಿ ಸೇರಿಸಿ ಕುಡಿದರೆ ಕೂಡಲೇ ನಿವಾರಣೆಯಾಗುವುದು.

## ನುಡಿಮುತ್ತು

✓ ಕನ್ನಡೇತರ ಭಾಷೆ ಕಲಿತರೂ ಕನ್ನಡವನ್ನು ಮರೆಯದಿದ್ದರೆ ಮಾತ್ರ ಕನ್ನಡವನ್ನು ಉಳಿಸಲುಸಾಧ್ಯ

**– ದ.ರಾ.ಬೇಂದ್ರೆ**

✓ ಎಣ್ಣೆ ಇಲ್ಲದೆ ದೀಪ ಬೆಳಗದು ಅಂತೆಯೇ ದೇವರಿಲ್ಲದೆ ಮಾನವನು ಬದುಕಲಾರ

**– ರಾಮಕೃಷ್ಣ ಪರಮಹಂಸ**

# ಸವಿರುಚಿ

## EGG LESS CAKES

### *Tuti Fruiti Cake*

***Ingredients:***

- Maida –100gm
- Nestle Milk Maid (condensed milk)—130gm (one big tin)
- Butter –50gm
- Baking powder—1spoon
- Baking soda---1/4 spoons
- Milk ---50ml
- Vanilla essence---1 spoon
- Mixed canned fruit tin one (or any canned fruit of your choice)

***Method:***

1. Mix well Maida, baking soda and baking powder.
2. Beat butter,milkmaid,milk and vanilla essence.Add the maida mixture to this and blend it to form a fluffy batter.
3. Pre heat the oven at 180 degree for 10 minutes. Put the cake batter in a baking pan and bake it for 25 minutes at 250 degrees .This cake tastes good when eaten hot.

***–vidya vittal***

## ಮಲೆನಾಡ ಸೊಗಡಿನ ರುಚಿ

### ಹಸಿ ಶುಂಠಿ ತಂಬುಳಿ:

**ಬೇಕಾಗುವ ಪದಾರ್ಥಗಳು:**
ಹಸಿ ಶುಂಠಿ–1 ತುಂಡು, ಮೆಣಸಿನ ಕಾಳು–12 ಕಾಳು, ಜೀರಿಗೆ–1/2 ಚಮಚ, ಇಂಗು–1/4 ಟೀ ಚಮಚ, ತೆಂಗಿನ ತುರಿ–2 ಟೇಬಲ್ ಚಮಚ, ಉಪ್ಪು–ರುಚಿಗೆ ತಕ್ಕಷ್ಟು, ಮೊಸರು–1/2 ಕಪ್,ಸಾಸಿವೆ–ಒಗ್ಗರಣೆಗೆ, ಕೊತ್ತಂಬರಿ–2 ಎಸಳು, ಕರಿಬೇವು– 8 ಎಲೆ, ತುಪ್ಪ– 1 1/2 ಟೇಬಲ್ ಚಮಚ.

**ಮಾಡುವ ವಿಧಾನ:**
1) 1 ಟೇಬಲ್ ಚಮಚ ತುಪ್ಪದಲ್ಲಿ ಸಣ್ಣದಾಗಿ ಹೆಚ್ಚಿದ ಹಸಿ ಶುಂಠಿ,ಮೆಣಸಿನ ಕಾಳು ಹಾಗೂ ಜೀರಿಗೆಯನ್ನು ಹಾಕಿ ಬಾಡಿಸಿಕೊಳ್ಳಿ.
2) ನಂತರ ಅದಕ್ಕೆ ತೆಂಗಿನ ತುರಿ,ಅರಿಶಿನ ಮತ್ತು ಇಂಗನ್ನು ಬೆರೆಸಿ ತಿರುವಿಕೊಳ್ಳಿ.
3)ತಿರುವಿದ ಮಸಾಲೆಗೆ ಮೊಸರು, ಉಪ್ಪು,ಕೊತ್ತಂಬರಿ ಹಾಗೂ ಕರಿಬೇವು ಸೇರಿಸಿ.
4) ಕೊನೆಗೆ ತುಪ್ಪದಲ್ಲಿ ಸಾಸಿವೆ ಒಗ್ಗರಣೆ ಕೊಡಿ.

**ಇದನ್ನು ಮಲೆನಾಡಿನಲ್ಲಿ ಊಟದ ಮೊದಲಿಗೆ ಅನ್ನದ ಜೊತೆಗೆ ಕಲಿಸಿ ಸವಿಯುತ್ತಾರೆ.**

### ಹಾಗಲಕಾಯಿ ಕಾಯಿರಸ:

**ಬೇಕಾಗುವ ಪದಾರ್ಥಗಳು:**
ಹಾಗಲಕಾಯಿ–1/4 ಕೆ.ಜಿ., ಅರಿಶಿನ–1 ಚಿಟಿಕೆ, ಉಪ್ಪು–ರುಚಿಗೆ ತಕ್ಕಷ್ಟು, ಎಣ್ಣೆ– 3 ಟೀ ಚಮಚ, ಇಂಗು– 1/4 ಟೀ ಚಮಚ, ಸಾಸಿವೆ– ಒಗ್ಗರಣೆಗೆ, ಕರಿಬೇವು–8 ಎಲೆ, ಬೆಲ್ಲ–5 ಟೇಬಲ್ ಚಮಚ, ಹುಣಸೆ ಪೇಸ್ಟ್–1/2 ಚಮಚ, ತೆಂಗಿನ ಕಾಯಿ–1/2 ಕಪ್,
**ಮಾಡುವ ವಿಧಾನ:**
1)ಹಾಗಲಕಾಯಿ ಸಣ್ಣಗೆ ಹೆಚ್ಚಿ ಅದಕ್ಕೆ ಅರಿಶಿನ, ಉಪ್ಪು–1/2 ಟೀ ಚಮಚ ಹಾಗೂ ಎಣ್ಣೆ–1/4 ಟೀ ಚಮಚ ಹಾಕಿ 1/2 ಗಂಟೆ ನೆನೆಸಿ. ನಂತರ ನೀರು ಹಾಕಿ ತೊಳೆಯಿರಿ.
2)ಒಂದು ಬಾಂಡ್ಲೆಯಲ್ಲಿ 2 ಟೀ ಚಮಚ ಎಣ್ಣೆ ಒಗ್ಗರಣೆಗೆ ಹಾಕಿ ಸಾಸಿವೆ, ಕರಿಬೇವು, ಇಂಗು (ಬೇಕಾಗಿದ್ದರೆ) ಮತ್ತು ಹಾಗಲಕಾಯಿ ಹಾಕಿ ಸಣ್ಣ ಉರಿಯಲ್ಲಿ ಹುರಿಯಿರಿ.
3)ನಂತರ ಅದಕ್ಕೆ ಬೆಲ್ಲ, ಹುಣಸೆ ಪೇಸ್ಟ್, ಉಪ್ಪು ಮತ್ತು ಸ್ವಲ್ಪ ನೀರು ಹಾಕಿ ಚೆನ್ನಾಗಿ ಕುದಿಸಿ.
4)ಇನ್ನೊಂದು ಕಡೆ ಮಿಕ್ಸಿಗೆ ತೆಂಗಿನ ಕಾಯಿ ಮತ್ತು ಕಾಯಿರಸದ ಪುಡಿ ಹಾಕಿ ತಿರುವಿಕೊಳ್ಳಿ.
5)ಕೊನೆಗೆ ಬಾಂಡ್ಲಿಯಲ್ಲಿ ಇರುವ ಕಾಯಿರಸಕ್ಕೆ ತಿರುವಿದ ಮಿಶ್ರಣ ಹಾಕಿ ಇನ್ನೊಂದು ಕುದಿ ಬರಿಸಿ.

*** ಕಾಯಿರಸದ ಪುಡಿಗೆ ಬೇಕಾಗುವ ಪದಾರ್ಥಗಳು:**
ಉದ್ದಿನ ಬೇಳೆ– 5 ಟೀ ಚಮಚ, ಕಡಲೆ ಬೇಳೆ– 5 ಟೀ ಚಮಚ, ಮೆಂತ್ಯ–1 ಟೀ ಚಮಚ, ಜೀರಿಗೆ–2 ಟೀ ಚಮಚ, ಧನಿಯಾ–2 ಟೇಬಲ್ ಚಮಚ, ಒಣ ಮೆಣಸಿನ ಕಾಯಿ– 10–12, ಕರಿಬೇವು–15 ಎಲೆ.
**ಮಾಡುವ ವಿಧಾನ:**
1)ಒಂದು ಖಾಲಿ ಬಾಂಡ್ಲಿಗೆ ಮೆಂತ್ಯ ಮತ್ತು ಒಣ ಮೆಣಸಿನ ಕಾಯಿ ಹಾಕಿ ಬಿಸಿ ಆದಮೇಲೆ ಉಳಿದ ಎಲ್ಲಾ ಪದಾರ್ಥಗಳನ್ನು ಹಾಕಿ ಹುರಿದು ಪುಡಿ ಮಾಡಿ.
2) ಈ ಪುಡಿಯನ್ನು ಡಬ್ಬಿಯಲ್ಲಿ ಹಾಕಿಟ್ಟು ಬೇಕಾದಾಗ ಉಪಯೋಗಿಸಬಹುದು.

**ಇದನ್ನು ಚಪಾತಿ, ಅನ್ನ, ರೊಟ್ಟಿ, ಇಡ್ಲಿ, ದೋಸೆ ಎಲ್ಲದರೊಡನೆಯೂ ಸವಿಯಬಹುದು.**

***– ಕವನ ರಾವ್***

**ಇದೇ ರೀತಿ ನಿಮ್ಮೂರಿನ ತರತರನಾದ ಅಡಿಗೆ ಸೊಗಡನ್ನು ಕಳಿಸಿಕೊಡಿ ನಾವೂ ನಿಮ್ಮೂರ ಸವಿಯನ್ನು ಸವಿಯುವಂತೆ ಮಾಡಿ. .**

# ಆಗುಹೋಗುಗಳು

**ಕರ್ನಾಟಕ:**

» ಕನ್ನಡದ ಖ್ಯಾತ ಸಾಹಿತಿ, ರಂಗಕರ್ಮಿ ಹಾಗೂ ವಿಧಾನಪರಿಷತ್ ಸದಸ್ಯರಾಗಿರುವ ಚಂದ್ರಶೇಖರ್ ಕಂಬಾರ್ ಅವರಿಗೆ 2009ನೇ ಸಾಲಿನ ಪ್ರಪ್ರಥಮ ಠಾಗೂರ್ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

» ಕಳೆದ ತಿಂಗಳು ನವದೆಹಲಿಯಲ್ಲಿ ಜರುಗಿದ ಗಣರಾಜ್ಯೋತ್ಸವ ದಿನದ ಪೆರೇಡ್ ನಲ್ಲಿ ಕರ್ನಾಟಕ ತಂಡದ ಡೊಳ್ಳು ಕುಣಿತ ನೃತ್ಯಕ್ಕೆ ಪ್ರಥಮ ಬಹುಮಾನ ಲಭಿಸಿದೆ.

» ಭಾವೈಕ್ಯತೆಯ ನಾಡು ಗದಗಿನಲ್ಲಿ ಗೀತಾ ನಾಗಭೂಷಣ್ ಅವರ ಅಧ್ಯಕ್ಷತೆಯಲ್ಲಿ 76ನೇ ಕನ್ನಡ ಸಾಹಿತ್ಯ ಸಮ್ಮೇಳನದ ನುಡಿಹಬ್ಬ ಜರುಗಿದೆ.

» ಹಿಂದಿ ಲೇಖಕ 'ಭೀಷ್ಮ ಸಹಾನಿ' ಅವರ ಪ್ರಾತಿನಿಧಿಕ ಹಿಂದಿ ಕತೆಗಳನ್ನು ಅನುವಾದಿಸಿದ ಶ್ರೀ ಡಿ.ಎಸ್. ಶ್ರೀನಾಥ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿ ದೊರಕಿದೆ. ಹಾಗೂ ಜಿ. ಎಸ್. ಶಿವರುದ್ರಪ್ಪ ಅವರ ಕವನ ಸಂಕಲವನ್ನು ಹಿಂದಿಗೆ ಭಾಷಾಂತರಿಸಿದ ಬಾಲಚಂದ್ರ ಜಯಶೆಟ್ಟಿ ಅವರಿಗೂ ಭಾಷಾಂತರ ಪ್ರಶಸ್ತಿ ಲಭಿಸಿದೆ.

**ಕುವೈತ್:**

» ಹತ್ತು ಮತ್ತು ಹನ್ನೆರಡನೇ ತರಗತಿಯ ಪರೀಕ್ಷೆ ಬರೆಯಲು ಸಜ್ಜಾಗುತ್ತಿರುವ ಕೂಟದ ಮಕ್ಕಳೆಲ್ಲರಿಗೂ ನಮ್ಮ ಶುಭ ಹಾರೈಕೆಗಳು.

» ನ್ಯೂ ಸೌತ್ ವೇಲ್ಸ್ ಯೂನಿವರ್ಸಿಟಿಯವರು ನಡೆಸಿದ ಪರೀಕ್ಷೆಯಲ್ಲಿ ಆಂಗ್ಲ ಭಾಷೆಯ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿರುವ ಅರ್ಜುನ್ ಪ್ರಭುಗೆ ನಮ್ಮ ಅಭಿನಂದನೆಗಳು.

# ಪ್ರತಿಭಾ ಮಲ್ಲಿಗೆ

## Arts and Craft

### *Painting with coffee powder.*

### *Method : Tracing the drawing on canvas*

Take a A4 size canvas and attach it to a wood backing by pasting. Choose a drawing, You can photo copy the drawing in black or white or draw your own drawing. Colour the back of the sheet where your drawing is with a normal lead pencil Now place the drawing face upwards on the canvas and trace the lines. The pencil marks from the back will help you to transfer these lines on the canvas without using a carbon sheet in between.

***Preparing the paint.***

Add a spoon full of nescafe coffee powder to a spoon of liquid fabric glue. Mix very well. Get different shades of brown by increasing or decreasing the proportion of the coffee powder and glue. You can add a tinge of black water colour to the coffee powder to get the dark brown.Water can be used as a medium to dilute the paint. Do not use too much water.

***Painting :***

Take a fine brush and paint the picture using the coffee paint. This painting retains the smell of coffee even after it is finished.Try a Dasa's picture to celebrate dasa jayanthi.



*-Shyamala Rao*



*Shreya Shenoy*
*5th std*

## ವರ್ಷದ ಕಾರ್ಯಕ್ರಮಗಳ ಪಟ್ಟಿ

### 2010-2011 ನೇ ಸಾಲಿನ ಕಾರ್ಯಕ್ರಮಗಳ ಪಟ್ಟಿ

1. ದಾಸೋತ್ಸವ 26-ಫೆಬ್ರವರಿ-2010
2. ಕ್ರೀಡಾ ದಿನ 26-ಮಾರ್ಚ್-2010
3. ಪ್ರತಿಭಾ ಕಾರಂಜಿ 16-ಏಪ್ರಿಲ್-2010
4. ಒಳಾಂಗಣ ವಿಹಾರ 21-ಮೇ-2010
5. ಕ್ರಿಕೆಟ್ ದಿನ 15-ಅಕ್ಟೋಬರ್-2010
6. ಕನ್ನಡ ರಾಜ್ಯೋತ್ಸವ 12-ನವೆಂಬರ್-2010
7. ವಾರ್ಷಿಕ ಸಮಾರಂಭ/ಹೊಸವರ್ಷ 7-ಜನವರಿ-2011

# ವಿಜ್ಞಾನ ಮತ್ತು ತಂತ್ರಜ್ಞಾನ

## HITS OF NEW TECHNOLOGY

### *High Definition DVD Today*

Until recently, two rival formats had been fighting to be the successor to DVD. On one side, HD-DVD, the next logical step from the existing DVD technology, backed by Toshiba and the HD-DVD Promotion Group. On the opposite side, the Sony-backed Blu-Ray disc so-called because the technology uses a refined blue laser that maximises storage capabilities.

The great news for consumers is that Blu-ray has emerged as the dominant format, Toshiba (heading the HD-DVD consortium) conceding victory to the rival High Definition DVD consortium.

### What is Blu-Ray?

Blu-Ray is an optical disc format which can hold up to 50GB of data, which is around six times the capacity of standard DVDs and 40 times the amount of data that a CD can hold.

The extra storage capacity of Blu-ray allows films to be stored at a much higher resolution which in turn produces a picture of unparalleled sharpness and clarity - a truly awe inspiring experience.

***Ramesh.C, KAC.,***
**Source:** Tech News

## ನಿಮಗಿದು ಗೊತ್ತೆ. . . ?

**ಬೆಂಗಳೂರಿನ ಬೃಹತ್ ನಗರದ ಹೃದಯಭಾಗದಲ್ಲಿರುವ ಹಾಗೂ ಪ್ರೇಮಿಗಳಿಗೆ ಆಕರ್ಷಣೆಯಾಗಿರುವ ಲಾಲ್ ಬಾಗ್ ಪಾರ್ಕಿನ ವಿಸ್ತೀರ್ಣ 240 ಎಕರೆ, ಮತ್ತು ಈ ಪಾರ್ಕಿನ ನಿರ್ಮಾಣವನ್ನು ‘ಹೈದರಾಲಿ’ ಪ್ರಾರಂಭಿಸಿದರು ಮತ್ತು ಹೈದರಾಲಿ ಮಗ ‘ಟಿಪ್ಪು ಸುಲ್ತಾನ್’ ಪೂರ್ಣಗೊಳಿಸಿದರು.**

## ಅಂತರಾಷ್ಟ್ರೀಯ ಖಗೋಳ ವರ್ಷ

ಸರಿ ಸುಮಾರು ನಾಲ್ಕು ನೂರು ವರ್ಷಗಳ ಹಿಂದೆ, 1609 ಆಗಸ್ಟ್ 25ರಂದು ಇಟಲಿಯ ಒಬ್ಬ ಖಗೋಳ ವಿಜ್ಞಾನಿ ತಾನು ತಯಾರಿಸಿದ ವಸುವೊಂದರ ಮೂಲಕ ಕೆಲವು ವರ್ತಕರಿಗೆ ಹಿಂದೆಂದೂ ಕಾಣದ ಹಾಗೂ ಅಧ್ಯಯನ ಮಾಡದ ಆಕಾಶದ ವಸ್ತುಗಳನ್ನು ತೋರಿಸಿದ್ದ. ಬಹುಶಃ ಈಗಾಗಲೇ ನಿಮಗೆ ಅರ್ಥ ಆಗಿರಬೇಕು ನಾನು ಯಾವುದರ ಬಗ್ಗೆ ಮಾತನಾಡುತ್ತಿದ್ದೇನೆಂದು. ನಿಜ ನಾನು ಹೇಳುತ್ತಿರುವ ದೂರದರ್ಶಕ ಹಾಗೂ ಅದನ್ನು ನಿರ್ಮಿಸಿದ ಇಟಲಿಯ ಖಗೋಳ ಶಾಸ್ತ್ರಜ್ಞ “ಗೆಲಿಲಿಯೋ ಗೆಲಿಲಿ”.

ದೂರದರ್ಶಕದ ನಿರ್ಮಾಣ, ಪ್ರಪಂಚದಲ್ಲಿ ಮುಖ್ಯ ಬದಲಾವಣೆಗೆ ಕಾರಣವಾಯ್ತು. ಇದು ವಿಜ್ಞಾನ, ತತ್ವಶಾಸ್ತ್ರ, ಸಮಾಜ ಧರ್ಮ, ಇತಿಹಾಸ ಎಲ್ಲದರ ತಳಹದಿಯನ್ನು ಪ್ರಶ್ನಿಸಿ ಅವುಗಳ ಮುಖಗಳನ್ನು ಬದಲಿಸಿದ ಕೀರ್ತಿ ದೂರದರ್ಶಕ ಹಾಗೂ ಗೆಲಿಲಿಯೋಗೆ ಸಲ್ಲಬೇಕು. ದೂರದರ್ಶಕ ಆಕಾಶಕಾಯಗಳು ಮತ್ತು ಸ್ವರ್ಗಲೋಕ ಇವುಗಳ ಬಗ್ಗೆ ತುಂಬ ಮುಖ್ಯವಾದ ವಿಷಯಗಳನ್ನು ಬಹಿರಂಗಪಡಿಸಿತು. ಹಾಗೆ




ಭೂಮಿ ಕೇಂದ್ರ ಸಿದ್ಧಾಂತ ಪ್ರತಿಪಾದಿಸಿದ ಸಂಪ್ರದಾಯವಾದಿಗಳು ಹಾಗೂ ಕಾಪರ್ನಿಕಸ್‌ನ ಸೂರ್ಯ ಕೇಂದ್ರ ಸಿದ್ಧಾಂತವನ್ನು ಒಪ್ಪಿದ ಜನರ ನಡುವೆ ವಾದ ವಿವಾದಕ್ಕೆ ಕಾರಣವಾಯ್ತು. ಸಾಮಾನ್ಯ ಮನುಷ್ಯ ಕೂಡ ಆಕಾಶ ಕಾಯಗಳನ್ನು ನೋಡಬಹುದು ಎಂದು ಮನವರಿಕೆಯಾಯಿತು. ಇದನ್ನು ತತ್ವಜ್ಞಾನಿ ಅರಿಸ್ಟಾಟಲ್ ಕೂಡ ಕನಸು ಕಂಡಿರಲಿಲ್ಲ.

ನಿಸರ್ಗದ ಅಧ್ಯಯನ ಜ್ಞಾನದ ಜೊತೆಗೆ ಉಪಕರಣಗಳ ಉಪಯೋಗಕ್ಕೆ ನಾಂದಿಹಾಡಿತು. ವಿಜ್ಞಾನದ ಈ ಅದ್ಭುತ ಕೊಡುಗೆಯ 400 ವರ್ಷಗಳ ವರ್ಷಾಚರಣೆ ಅಂಗವಾಗಿ 2009ನೇ ವರ್ಷವನ್ನು **‘ಅಂತರಾಷ್ಟ್ರೀಯ ಖಗೋಳ’** ವರ್ಷವನ್ನಾಗಿ ಆಚರಿಸಲಾಯಿತು.

***ಚಿತ್ರ ಹಾಗೂ ಬರಹ***
***–ಯೋಗೀಶ್ ಸಿ.ಜೆ.***

# ಚಿನಕುರಳಿ




"BTW, Jose! That apartment block near ICSK?
The client says make only the lobby appear fancy.
Forget the flat"

*-ಎಚ್. ಎನ್. ಅಶೋಕ್ ಕುಮಾರ್*

## ದಾಸ ನಮನ

**"ಮನ್ಮನೋಭಿಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ**
**ಪುರಂದರಗುರುಂ ವಂದೇ ದಾಸಶ್ರೇಷ್ಟಂ ದಯಾನಿಧಿಂ"**

ಲೌಕಿಕ ವೃತ್ತಿಯಲ್ಲಿ ಬಿದ್ದು ಜಗವನ್ನೇ ನಂಬಿ, ಪರಮಾರ್ಥವನ್ನು ಮರೆತು ಗತಿಶೂನ್ಯವಾಗತೊಡಗಿದೆ. ಜನತೆಯನ್ನು ಸರಿ ದಾರಿಗೆ ಕರೆತರಲು ಕಾಲಕಾಲಕ್ಕೆ ಅಲ್ಲಲ್ಲಿ ಸಾಧು-ಸಂತರು ತಲೆಯೆತ್ತಿದರು. ಈ ಜ್ಞಾನಿಗಳು ವೇದ, ಉಪನಿಷತ್ತು ಹಾಗು ಪುರಾಣಗಳ ಸಾರವನ್ನು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ತಮ್ಮ ಹಾಡುಗಳನ್ನು ರಚಿಸಿದರು. ಕರ್ನಾಟಕದಲ್ಲೂ ಇಂತಹ ಅನೇಕ ದಾಸವರ್ಯರನ್ನು ನಾವು ಕಾಣಬಹುದು. ಇವರಲ್ಲಿ ಶ್ರೀ ಪುರಂದರದಾಸರು "ದಾಸಶ್ರೇಷ್ಠ" ರೆಂದು ಹೆಸರಾದವರು.

ಶ್ರೀಪುರಂದರದಾಸರದು ಗಂಧರ್ವ ಗಾಯನ. ಅವರ ಒಂದೊಂದು ರಚನೆಯು ಅಮೃತವಾಹಿನಿ. ಇವರ ರಚನೆಗಳಲ್ಲಿ ಪ್ರಾರ್ಥನೆಯ ಜೊತೆಗೆ ಸಂದೇಶ ಕೂಡ ಅಡಗಿವೆ. ದಾಸರು ಆಡಿದ ಮಾತೆಲ್ಲ ಹಾಡಾಯಿತು, ಅವರ ತಲೆಯಲ್ಲಿ ಸುಳಿದುದೆಲ್ಲಾ ಸುಳ್ಳಾಗದವು, ಅವರ ಉಂಡು, ಉಟ್ಟು, ಉಸಿರಾಡಿದ್ದೆಲ್ಲಾ ಉಗಾಭೋಗಗಳಾದವು!!!

ಶ್ರೀಪುರಂದರದಾಸರು ಕರ್ನಾಟಕ ಸಂಗೀತದ ಸ್ಥಾಪನಾಚಾರ್ಯರು, ಕರ್ನಾಟಕಸಂಗೀತದ ಪಿತಾಮಹಾರೆನಿಸಿಕೊಂಡಿದ್ದಾರೆ. ಅವರ ರಚನೆಗಳಾದ ಸರಳೆವರಸೆ, ಜಂಟಿವರಸೆ, ಪಿಳ್ಳಾರಿ ಗೀತೆಗಳು ಎಲ್ಲರಿಗೂ ತಿಳಿದಿರುವ ವಿಷಯವೆ. ಜನಸಾಮಾನ್ಯರ ಮನೆಬಾಗಿಲಿಗೆ ಸಂಗೀತದ ಮೂಲಕ ಜ್ಞಾನಭಕ್ತಿಗಳ ಗಂಗಾವಾಹಿನಿಯನ್ನು ಹರಿಸಿ, ಪರಂಪರೆಯನ್ನು ನಿರ್ಮಿಸಿದರು.

ಐದು ಶತಮಾನಗಳಿಗೂ ಹಿಂದೆ ರಚಿಸಿರುವಂತಹ ಅವರ ಕೃತಿಗಳು ಇಂದಿಗೂ ಅರ್ಥಪೂರ್ಣವಾಗಿವೆ. ಉದಾ: ಈಸಬೇಕು ಇದ್ದು ಜಯಿಸಬೇಕು, ಎಲ್ಲಾರು ಮಾಡುವುದು ಹೊಟ್ಟೆಗಾಗಿ . . .

ಇಂದಿನ ನಾಗಾಲೋಟದಿಂದ ಬಿಸಿಲ್ಗುದುರೆಯ ಬೆನ್ನು ಹತ್ತಿ ಸಾಗಿರುವ ಪ್ರಪಂಚದಲ್ಲಿ ವೇದ-ಪುರಾಣಗಳ ಪಠಣ ಸಾಧ್ಯವಿಲ್ಲದಿದ್ದರೂ ದಾಸರ ಕೃತಿಗಳನ್ನು ಮನನ ಮಾಡಿದರೆ ಸ್ವಲ್ಪಮಟ್ಟಿಗಾದರೂ ಮನಸ್ಸಿಗೆ ನೆಮ್ಮದಿ, ಶಾಂತಿ ದೊರೆಯಬಹುದೇನೋ?

*-ವಸಂತ ಅಶೋಕ್ ಕುಮಾರ್*



# ಪುಟಾಣಿ ಪ್ರಪಂಚ



# Kids Corner

## WATER

Ever wondered life without water? Let's try imagining how a father would explain the meaning of water to his son fifty years from now.

**SON:** ***"What is water?"***
**FATHER:** "Water is an elixir of life that is not found so easily. It is something that causes diseases not because of its presence but its absence. Even a single glass of it is more precious than a pound of gold.

There was a time, say about five hundred years ago, when water was more abundant than blood, and today, there is more oil on this land of famine.

When I was born fifty years ago, I was allowed as much as water as I wanted. However, today I am allowed only a glass per day for the services I provide to the government. I had never realized the value of water those days, when I use to take long showers or keep the tap on while brushing. Today, I feel the pinch. The pinch when I touch my bald head that was shaved to save the water used for washing it!"

This would probably be the way life would shape fifty years from today!

Let's all wake up! It is time to do something. It is time to save water. Why? Because we can't wait till the last lake dries, the last glacier melts or the last dam lies empty. Because we can't leave a dry lake or an empty dam as heritage for our successors. So let us all work hand in hand for a better tomorrow.

***-Yash Shanbog***
***7th Std***

## MY MOM

*It Feels As If*
*You Have Come From*
*Beneath the star*
*Like An Angel to Protect Me*

*People Say Sugar Is Sweet*
*But What Is Sweet*
*For Me*
*Is My Mother Sweetest.*

*When I Was A Baby*
*You Held Me Close*
*Taking Care Of*
*Every Single Tear.*

*When It Was Time To Go To*
*School*
*You Told Me Not To*
*Cry*
*I Did Not Cry Because I Knew*
*You Were There With Me.*

*You Are My Best Mom*
*You Took Every Step with Me*
*And Never Let Me Fall*
*"I Love You"*

*- Aditi Suvarna*
**7th Std**

## ಕನ್ನಡಕೂಟ

ಸೇರಿದರೆ ನಾವು ಕನ್ನಡಕೂಟ
ಸಿಗುವುದು ಮಕ್ಕಳಿಗೆ ಆಟ
ಜೊತೆಗೆ ಎಲ್ಲರಿಗೂ ಊಟ...

-ಮನುವಚನ್ ಮಹೇಶ್
3ನೇ ತರಗತಿ

## TWO FROGS

***-A Small Story***

There lived two frogs named Bolu and Dolu in a river. Bolu was very hard working and Dolu was very lazy. One day, both were swimming quite far from the river bank. They got trapped in a plastic cover floating in the river. Both the frogs tried hard to come out of it but failed as the plastic was very big and filled with water. Bolu told Dolu "friend , try hard, do not give up. We will swim to the river bank and come out of it." Dolu swam for a while then told Dolu "it is very tiring to swim with this big cover.

Any way, we are going to die why we should struggle so much". Telling this Dolu stopped swimming. He drowned and died. Bolu did not give up. He swam and swam struggling . Finally, reached the bank of the river and came out of the cover.

This shows that with hard work you can do it if you believe you can.

***By Varshini Vittal***
***III rd Std***

ಕೈಗೆ ಹಾಕದ ಬಳೆ ಯಾವುದು

# PEACE

The Symbol of PEACE is DOVE
And from Peace comes LOVE
The Ones who Cause DESTRUCTION
Are Humans with Their CONFUSION
Spread PEACE!! Stop WARS!!
For this World is YOURS
Make an Enemy your FRIEND
For a Broken Friendship you can't MEND
Peace is a Treasure the World must POSSESS
For this and this Alone can bring us SUCCESS

*- Kshamata Mallur*
*Class VII*







**ಈ ತಿಂಗಳು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಎಲ್ಲಾ ಮಕ್ಕಳಿಗೂ ನಮ್ಮ ಶುಭಾಷಯಗಳು**

*Mitali Ramkumar N.*
*Aditya Ananda Sangri*
*Adith Anil Rai*
*Suraiya Azad*
*Skanda Kannan*
*Rachna Rajendra Rao*
*Rithik Ramachandran Seetharaman*
*Rania Ramesh Kidiyoor*
*Apoorva Santhosh Kulkarni*
*Aditya Suresh Rao Neramballi*
*Mohd Naveed Hussain Mohammed nazeer Bolar*
*Aditya Ananth Mangalgi*
*Gauri Karunakar Shetty*
*Aadarsh Shridhar K.*
*Poorvi Vivek Shetty Belman*

## ಒಗಟಿನ ಗುಟ್ಟು–ನಿಮ್ಮ ಮುಂದೆ ರಟ್ಟು

| | |
|---|---|
| ಪುಟ 2: ಗಡಿಯಾರ | ಪುಟ 10: ನೆಲ್ಲಿಕಾಯಿ |
| ಪುಟ 3: ಒನಕೆ | ಪುಟ 11: ಗಂಧದ ಮರ |
| ಪುಟ 4: ನೀರಿನ ಬಿಂದಿಗೆ | ಪುಟ 12: ದೀಪ |
| ಪುಟ 5: ನಾಲಿಗೆ | ಪುಟ 13: ಸೂಜಿದಾರ |
| ಪುಟ 6: ರಾಗಿ ಕಲ್ಲು | ಪುಟ 14: ಕೊಡಬಳೆ |
| ಪುಟ 7: ಟೊಮೆಟೊ ಬೀಜಗಳು | ಪುಟ 15: ಉಪ್ಪು |
| ಪುಟ 8: ಮೂಗು | ಪುಟ 16: ಅಂಗಿ (ಶರ್ಟ್) |
| ಪುಟ 9: ಗಾಡಿ | |

## ರಂಗೋಲಿ ಮನೆಯಂಗಳದಲಿ




ನೀರಲ್ಲಿ ಹುಟ್ಟಿ ನೀರಲ್ಲಿ ಕರಗುವೆನು . . . ನಾನ್ಯಾರು?



karthik Shyam Kumar
7th Std

## ಮಾಘ ಸಂಚಿಕೆಯ ಮೆದುಳಿಗೊಂದು ಕಸರತ್ತು– ತೋರಿಸಿ ನಿಮ್ಮ ತಾಕತ್ತು ವಿಭಾಗದ ಉತ್ತರಗಳು

1. ಜವಾಹರ್ ಲಾಲ್ ನೆಹರು
2. ಲಾಲ್ ಬಹದ್ದೂರ್ ಶಾಸ್ತ್ರಿ
3. ಸರದಾರ್ ವಲ್ಲಭಬಾಯ್ ಪಟೇಲ್
4. ಮಹಾತ್ಮಾ ಗಾಂಧಿ
5. ಇಂದಿರಾ ಗಾಂಧಿ
6. ಡಾ. ಅಬ್ದುಲ್ ಕಲಾಮ್
7. ಚಂದ್ರಶೇಖರ್ ಅಜಾದ್
8. ಭಗತ್ ಸಿಂಗ್
9. ಸುಭಾಷ್ ಚಂದ್ರ ಭೋಸ್
10. ಡಾ. ರಾಜೇಂದ್ರ ಪ್ರಸಾದ್
11. ಡಾ. ಬಿ.ಆರ್. ಅಂಬೇಡ್ಕರ್
12.. ಬಾಲ ಗಂಗಾಧರ್ ತಿಲಕ್
13. ರವೀಂದ್ರನಾಥ್ ಠಾಕೂರ್
14. ಡಾ. ರಾಧಾಕೃಷ್ಣನ್

**ಈ ಸ್ಪರ್ಧೆಯ ವಿಜೇತರು:**

1. ಕಾರ್ತಿಕ್ ಶ್ಯಾಮ್ ಕುಮಾರ್
2. ನಾಗಮಣಿ ಉಲ್ಲಾಸ್
3. ಜಯಲಕ್ಷ್ಮಿ ವಿಶ್ವೇಶ್ವರ್

ಮಾಘ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರ ಕಳುಹಿಸಿದ ಎಲ್ಲರಿಗೂ ನಮ್ಮ ಧನ್ಯವಾದಗಳು ಹಾಗೂ ವಿಜೇತರಿಗೆ ನಮ್ಮ ಶುಭಾಷಯಗಳು..



shreya .B
9th Std

## ಕೊನೆ ಹನಿ...

ಇದುವರೆಗೂ ತಾಳ್ಮೆ ವಹಿಸಿ ಪುಟ ತಿರುಗಿಸಿ ಎಲ್ಲಾ ಭಾಗಗಳನ್ನೂ ಓದಿರುವಿರೆಂದು ಭಾವಿಸುತ್ತೇವೆ. ಇಷ್ಟು ವಿಭಾಗಗಳಲ್ಲಿ ಯಾವುದು ಇಷ್ಟವಾಗಿವೆ, ಯಾವ ವಿಭಾಗಗಳಲ್ಲಿ ಬದಲಾವಣೆ ಬೇಕೆನಿಸಿದೆ ಎಲ್ಲವನ್ನು ತಿಳಿಸಿ.

ಕೂಟದ ಹಿರಿಯ–ಕಿರಿಯರೆಲ್ಲಾ ಹಲವಾರು ಲೇಖನಗಳನ್ನು ಮರಳಮಲ್ಲಿಗೆಗೆ ಕಳುಹಿಸಿದ್ದೀರಿ, ಅವುಗಳಲ್ಲಿ ಕೆಲವು ಲೇಖನಗಳು ಸ್ಥಳಾವಕಾಶದ ಅಭಾವದಿಂದ ಈಗ ಪ್ರಕಟಗೊಳ್ಳುತ್ತಿಲ್ಲ ಆದರೆ ಮುಂಬರುವ ಸಂಚಿಕೆಗಳಲ್ಲಿ ಇವುಗಳಿಗೆ ಆದ್ಯತೆ ನೀಡಲಾಗುವುದು ಹಾಗೂ ಹೀಗೆಯೇ ಪ್ರತಿ ತಿಂಗಳು ನಿಮ್ಮೆಲ್ಲರ ಬರಹಗಳು ಮರಳ ಮಲ್ಲಿಗೆಯ ಪೆಟ್ಟಿಗೆಗೆ ಸುರಿಮಳೆಗಯ್ಯುವುದೆಂದು ಬಯಸುತ್ತೇವೆ.

*ನಿಮ್ಮ ಅನಿಸಿಕೆಗಳಿಗೆ ನಮ್ಮ ಪೆಟ್ಟಿಗೆ – maralamallige2010@gmail.com*

---

**ಕೈ ಉಂಟು ಕಾಲಿಲ್ಲ, ತೊಳುಂಟು ಬೆರಳಿಲ್ಲ, ಬೆನ್ನುಂಟು ಎಲುಬಿಲ್ಲ. . . . ನಾನ್ಯಾರು?**